
ಕೊರವಂಜಿ



ನವೆಂಬರ್ ೧೯೪೭

★

ಸಂಪಾದಕರು:
ಶ್ರೀ. ರಾ. ಶಿ.

ಸಲಹೆಗಾರರು:
ಶ್ರೀ. ನಾ. ಕಸ್ತೂರಿ

ಚಿತ್ರಕಾರರು:
ಶ್ರೀ. ಆರ್. ಕೆ. ಲಕ್ಷ್ಮಣ್

★

ಬಿಡಿಪತ್ರಿಕೆ
ಎರಡಾಣೆ.

ತಿಳಿನಗೆಯ ಮಾಸ ಪತ್ರಿಕೆ

ಕೊ ರ ವಂ ಜಿ

ಕೊರವಂಜಿಯು ಪ್ರತಿ ತಿಂಗಳ ಪಾಡ್ಯವೂ ಹೊರಬೀಳುವುದು.

ತಿಳಿ ಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನು ದ್ವೇಷಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.


ಸಂಪಾದಕೀಯ ಪತ್ರ ವ್ಯವಹಾರಗಳನ್ನು ಸಂಪಾದಕರು. ನಂ. ೧, ವೆಂಕಟ ರಂಗೈಯ್ಯಂಗಾರ್ ರಸ್ತೆ, ಮಲ್ಲೇಶ್ವರ, ಬೆಂಗಳೂರಿನಲ್ಲಿ ನಡೆಸಬೇಕು.

ವ್ಯವಸ್ಥಾಪಕರಲ್ಲಿ ಮಿಕ್ಕ ವಿಷಯಗಳನ್ನು ಪ್ರಸ್ತಾಪಿಸಬೇಕು.

ವ್ಯವಸ್ಥಾಪಕರು,
೨೮-ಎ, ಲಾಲ್‌ಬಾಗ್ ರೋಡ್, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ರೂ. 2-0-0 **ಬಿಡಿ ಪ್ರತಿ 0-2-0**

ವಿಷಯಾನುಕ್ರಮಣಿಕೆ



ಸಂಪುಟ ೧] ಕೊರವಂಜಿ, ನವಂಬರ್ ೧೯೪೨ [ಸಂಚಿಕೆ ೮

"ಕುಹ ಕಿಡಿಗಳು"

ಕೆಲವು ಮೋಟಾರೀಕರು ರಸ್ತೆಯೆಲ್ಲಾ ತಮ್ಮದೆಯೋ ಎಂಬಂತೆ ವಾಹನ ನಡೆಸುತ್ತಾರೆ.

—ಹೌದು, ಇನ್ನೂ ಕೆಲವರು ಮೋಟಾರು ತಮ್ಮದೆಯೋ ಎಂಬಂತೆ ನಡೆಸುತ್ತಾರೆ.

* * *

ಪೆಟ್ಟಿಗೆಗಳಿಗೆ ಕೂಡ ಜೀವವಿದೆಯೆಂತೆ.

—ನಮಗೂ ಸಂದೇಹ ಬಂದಿತ್ತು. ಏಕೆಂದರೆ ರೇಡಿಯೋ ಮುಂದೆ ಇಟ್ಟಿದ್ದ ಪೆಟ್ಟಿಗೆಯು ಆಗಾಗ್ಗೆ ಬಾಯಿ ಬಿಟ್ಟು ಆಕಳಿಸುತ್ತಿತ್ತು.

* * *

ಕಾರ್ಯ ನಿರತೆಯು ಸರ್ವೋತ್ಕೃಷ್ಟ ಅಮೃತವಂತೆ.

—ಒಂದೇ ಕಷ್ಟ. ಅಮೃತವನ್ನು ಹೊಟ್ಟೆ ತುಂಬ ಉಂಡ ಮೇಲೆ ತೆಗೆದುಕೊಳ್ಳಬೇಕು.

* * *

ರಷ್ಯಾದಲ್ಲಿ ಕೂಡ ಎಣ್ಣೆಗಾಗಿ ಬಹಳ ಪ್ರಯತ್ನ ಪಡುತ್ತಿರುವರಂತೆ.

-ಅವರು ಅಭ್ಯಂಜನವನ್ನೇ ಮಾಡುವುದಿಲ್ಲ ಎಂದು ನಾವು ತಿಳಿದುಕೊಂಡಿದ್ದೆವು.

* * *

ನವಯುವತಿಯರ ಹೊಸ ಶೃಂಗಾರ ಗೊತ್ತೇ

....ಉಗುರುಗಳಿಗೆ ತ್ರಿವರ್ಣದ ಅಲಂಕಾರ—ಗೋರಂಟಿಯ ಬದಲು

ಹಣವಂತ ಹೆಣ್ಣು ಮಕ್ಕಳು ಬಳೆಗಳಲ್ಲಿ ಒಂದು ಹೊಸ ಪಠಾಣಿಯನ್ನು ಆರಂಭಿಸಿರುವರಂತೆ.

—ಹೌದು, ನಮಗೂ ಗುಮಾನಿ. ಅದು "ರೂಕೂರೂರೂರೂ" ರೀತಿಯದಾಗಿರಬಹುದೆಂದು.

*　　　*　　　*

ಆಕಸ್ಮಿಕವಾಗಿ ಕೆರೆಗೆ ಬಿದ್ದ ಸುಂಕದ ಕಟ್ಟೆಯವನೊಬ್ಬನನ್ನು ವಿದ್ಯಾರ್ಥಿಯೊಬ್ಬನು ರಕ್ಷಿಸಿದುದನ್ನು ಊರವರೆಲ್ಲರೂ ನೋಡಿದರಂತೆ.

—ವಿದ್ಯಾರ್ಥಿಯು ಸುರಕ್ಷಿತವಾಗಿ ಇನ್ನೂ ಇದ್ದಾನಂತೆ !

*　　　*　　　*

ಮೊನ್ನಿನ ಸಭೆಯೊಂದರಲ್ಲಿ ಎರಡೆರಡು ಚಪ್ಪರ ಬದನೇ ಹಣ್ಣುಗಳನ್ನು ಪ್ರವೇಶ ಧನವಾಗಿ ವಿಧಿಸಿದ್ದರು.

—ಈ ರೀತಿ ಆಯುಧ ಸಾಮಗ್ರಿಗಳನ್ನು ಶೇಖರಿಸಿ ಭಾಷಣಕಾರರನ್ನು ರಕ್ಷಿಸುವುದು ಒಳ್ಳೆಯದೇ ಅಲ್ಲವೇ !

*　　　*　　　*　　　*

ಅವಿವಾಹಿತರು ಎಷ್ಟೋ ಜನರು ಸೌಮ್ಯವಾದ ಸುರೂಪಿಯಾದ ಪತ್ನಿಯರು ದೊರೆತರೆ ಸಂತೋಷ ಎನ್ನುತ್ತಾರೆ.

—ಬಹು ಮಂದಿ ಮದುವೆಯಾದವರೂ ಕೂಡ ಇದನ್ನು ಅನುಮೋದಿಸುತ್ತಾರೆ.

*　　　*　　　*

ಬೆಂಗಳೂರಿನ ಜಟಕಾಗಳೆಲ್ಲಾ ರಸ್ತೆ ಬಿಟ್ಟಮೇಲೆ ಎಲ್ಲಿಗೆ ಹೋಗುತ್ತವೆ ಎಂದು ಒಬ್ಬರು ಪ್ರಶ್ನಿಸುತ್ತಾರೆ.

—ಉತ್ತರ ಅವು ರಸ್ತೆಗಳನ್ನು ಬಿಡುವುದೇ ಇಲ್ಲ.

*　　　*　　　*

ಹೆಬ್ಬಿಗುಬ್ಬಾಲೆಯ ನ್ಯಾಯಾಧೀಶರೊಬ್ಬರು ಚಳತೊಂಬುಗಳನ್ನು ಹೆಂಗಸರು ಹಾಕಕೂಡದೆಂದು ವಿಧಿಸಿದ್ದಾರಂತೆ.

—ಅಂದ ಮೇಲೆ ಸರ್ವಾನುಮತದಿಂದ ಅಂಗೀಕಾರವಾದಂತೆಯೇ !

*　　　*　　　*

ಸಿನಿಮಾ ನೋಡುವುದಕ್ಕೆ ಹೋಗಿ ಹೋಗಿ ಜಿರಾಫೆಗೆ ಕತ್ತು ಉದ್ದ ಆಯಿತೆಂಬುದು ಶುದ್ಧ ಸುಳ್ಳು.

ಹುರಿಗಾಳು

೧. ಮ್ಯಾನೇಜರಿಗೆ ಗುಮಾಸ್ತೆಯ ಮೇಲೆ ವಿಪರೀತ ಕೋಪ. ಯದ್ವಾ ತದ್ವಾ ಪಿತೃ ಪಿತಾಮಹರನ್ನೆಲ್ಲಾ ಸ್ತೋತ್ರ ಮಾಡಿದರು. ಕಡೆಗೆ ಆ ಬಡಪಾಯಿಯನ್ನು ಕುರಿತು "ಏನ್ರೀ, ಈ ಆಫೀಸಿಗೆ ಮ್ಯಾನೇಜರು ಯಾರು? ನಾನೋ? ನೀವೋ?" ಅಂದರು. ಆತ ಪಾಪ, "ನೀವೇ ಸಾರ್" ಅಂದ. ಅದಕ್ಕೆ ಮ್ಯಾನೇಜರು "ಮತ್ತೆ ನೀವು ಯಾತಕ್ರೀ ಇಂತಹ ಮುಟ್ಠಾಳತನ ಮಾಡಬೇಕು? ನನಗೆ ಯಾತಕ್ರೀ ಸಂಬಳ ಕೊಡುತ್ತಾರೆ ಸರ್ಕಾರದವರು?" ಎಂದರು. ಅವರೆದುರು ಯಾವತ್ತೂ ನಗದ ಗುಮಾಸ್ತೆ ಆ ಹೊತ್ತು ನಕ್ಕೇಬಿಟ್ಟ.

* * *

೨ "ಏನು ಸ್ವಾಮಿ! ಬರೆಯುತ್ತಿರುವುದು? ಎಂದು ಒಬ್ಬರು (ಅವರ ಕಿವಿ ಕೊಂಚ ಮಂದ) ಮತ್ತೊಬ್ಬರನ್ನು ಕೇಳಿದಾಗ ಅವರು, "ಏನೂ ಇಲ್ಲ! ಒಂದು ಸಂಸಾರ ಚಿತ್ರ." ಅಂದರಂತೆ, ಆಗ ಮಂದಕಿವಿಯವರು, "ಗೊತ್ತಾಯಿತು, ಗೊತ್ತಾಯಿತು, ಸಂಗ್ರಾಮ ಚಿತ್ರ ತಾನೇ" ಅಂದರಂತೆ. ಕಿವಿ ಮಂದವಾದರೂ ಬುದ್ಧಿ ಚುರುಕು.

* * *

೩. "ಅಲ್ರೀ! ತಮ್ಮ ಹೋಟಲಲ್ಲಿ ಊಟ ಮಾಡಿಬಿಟ್ಟು ಕಾಸು ಕೊಡದೆ ಹೊರಟುಹೋದರೆ ಏನು ಮಾಡುತ್ತೀರಿ" ಅಂತ ಕೇಳಿದಾಗ, ಹೋಟಲ್ ಮಾಲೀಕರು "ಬಿಡಿ, ಬಿಡಿ, ನನ್ನ ಹೋಟಲಲ್ಲಿ ಊಟ ಮಾಡಿದವನು ಬಹುದೂರ ಹೋಗಲಾರ" ಅಂದರಂತೆ.

* * *

೪ "ಅಲ್ಪಸ್ವಲ್ಪ ನೆಗಡಿ ಬಂದರೂ ಕೂಡ ಡಾಕ್ಟರ ಹತ್ತಿರ ಹೋಗಿ ಔಷಧಿ ತೆಗೆದುಕೊಂಡು ಬರಬೇಕು. ಏಕೆಂದರೆ ಅವರುಗಳು, ಪಾಪ, ಕಷ್ಟಪಟ್ಟು ಹಣ ಖರ್ಚುಮಾಡಿ ಓದಿ ಪ್ಯಾಸು ಮಾಡಿ ಬಂದಿದಾರೆ. ಅವರ ತಾಪತ್ರಯ ತೀರಬೇಕಾದರೆ, ನಮ್ಮಂತಹವರು ನಾಲ್ಕು ಜನ ನಾಲ್ಕುನಾಲ್ಕು ಆಣೆ ಕೊಟ್ಟರೆ ತಾನೆ?

ಆದರೆ, ಇನ್ನೊಂದು ವಿಷಯ. ಮನೆಗೆ ಬಂದ ಕೂಡಲೇ ತಂದ ಔಷಧಿಯನ್ನು ಕಿಟಕಿಯಿಂದ ಹೊರಕ್ಕೆ ಸುರಿದುಬಿಡಬೇಕು. ಏಕೆಂದರೆ, ನಾವುಗಳು, ಪಾಪ, ಬದುಕಿ ಬಾಳಬೇಕಾದವರು. ನಮ್ಮನ್ನು ನೆಚ್ಚಿಕೊಂಡೇ ನಾಲ್ಕು ಜನರಿರುವಾಗ ಸಿಕ್ಕಿದ್ದನ್ನೆಲ್ಲಾ ಗಂಟಲೊಳಕ್ಕಿಳಿಸುವುದನ್ನು ತಪ್ಪಿಸಿಬಿಡಬೇಕು,' ಎಂದು ಒಬ್ಬರುಹೇಳಿದರು.

* * *

೫ "ನಿನ್ನೆ ಹರಿಕಥೆ ನಡೆಯುತ್ತಿರುವಾಗ ಅಲಮೇಲಮ್ಮನವರು ಗೊರಕೆ ಹೊಡೆದರೆಂದೂ ಅಂದರು ಒಬ್ಬರು ಪುರಾಣ ಪುರುಷರು. "ಹೂಂ, ಅಂದ್ರೆ ಅವರು ಹೊಡೆದ ಗೊರಕೆಯಿಂದ ಸುತ್ತಮುತ್ತ ಇದ್ದ ಎಲ್ಲರಿಗೂ ಎಚ್ಚರ ಆಗಿಹೋಯಿತು," ಅಂದರು ಅವರ ಸಹಧರ್ಮಿಣಿ.

* * *

೬ ಮಾಲೀಕರೇ ಡ್ರೈವ್ ಮಾಡುತ್ತಿದ್ದಾಗ ಮೋಟಾರುಗಾಡಿ ಮರಕ್ಕೆ ಡಿಕ್ಕಿ ಹೊಡೆಯಿತು. ಆಗ ಒಳಗಿದ್ದ ಸ್ನೇಹಿತ, "ಅದು ಸರಿ! ಸೋಮು, ಪಕ್ಕದಲ್ಲಿ ಮರ ಇಲ್ಲದಿದ್ದರೆ ನೀನು ಮೋಟಾರನ್ನು ಹೇಗೆ ನಿಲ್ಲಿಸುತ್ತಿದ್ದೆ" ಅಂತ ಕೇಳಿದನಂತೆ.

* * *

೭ "ಸರೋಜಳಿಗೆ ಹಾರ್ಮೋನಿಯಂ ಪಾಠ ಪ್ರಾರಂಭವಾದಾಗಿನಿಂದ ಪಕ್ಕದ ಮನೆಗೆ ಯಾರೂ ಬಾಡಿಗೆಗೆ ಬಂದಿಲ್ಲ— ಅಂತ ಹೇಳಿದೆಯಲ್ಲಾ ! ಮೊನ್ನೆ ಯಾರೋ ಬಂದರು !" ಅಂತ ಹೇಳಿದರೆ, ಆಕೆ, 'ಅವರು ಯಾರು ಗೊತ್ತೆ ? ಸರೋಜನ ಹಾರ್ಮೋನಿಯಂ ಮೇಷ್ಟರು' ಅಂದಳಂತೆ.

* *

೮ "ನಿಮ್ಮ ಹಳೆಯ ಬಾಕಿ ವಸೂಲು ಮಾಡಿಕೊಂಡು ಬರದೆ ಇದ್ದರೆ ನನ್ನನ್ನು ಕಳುಹಿಸಿಬಿಡುತ್ತಾರಂತೆ. ಸಾಹುಕಾರರು ಅಂಗಡಿಯಿಂದ !'' ಅಂತ ಜವಾನ ಗೋಳಾಡಿದರೆ, ರೊಕ್ಕಸಾಲಿಗ, ಸ್ವಸ್ಥವಾಗಿ ಕಾಲಿನ ಮೇಲೆ ಕಾಲು ಹಾಕಿಕೊಂಡು "ಪರವಾಗಿಲ್ಲ, ನಿನ್ನನ್ನು ಅಂಗಡಿಯಿಂದ ಓಡಿಸುವುದಕ್ಕೆ ನಿಮ್ಮ ಸಾಹುಕಾರರು ಒಳ್ಳೆಯ ಉಪಾಯ ಹೂಡಿದ್ದಾರೆ" ಅಂದರಂತೆ.

* * *

೯ "ಡಾಕ್ಟರೇ ನನಗೆ ರಾತ್ರಿ ನಿದೆಯೇ ಬರುತ್ತಿಲ್ಲ....ಪೂರಾ ಒದ್ದಾಡುತ್ತಿದ್ದೇನೆ'' ಅಂತ ಹೇಳಿದರೆ, ಡಾಕ್ಟರು ಕೂಡಲೇ ಒಂದು ಔಷಧಿ ಕಳಿಸಿಕೊಟ್ಟು ಹದಿನೈದು ನಿಮಿಷಕ್ಕೊಂದಾವರ್ತಿ ಅರ್ಧ ಔನ್ಸು ಕುಡಿಯಿರಿ "ಅಂದರು' ಇದನ್ನು ಕುಡಿದರೆ ನಿದ್ದೆ ಬರುತ್ತೆ ಅಂತ ಆತ ಕೇಳಿದ. ಹಣ ಕೈಗೆ ಬಂದ ಮೇಲೆ ಡಾಕ್ಟರು "ನಿದ್ದೆ ಬರದಿದ್ದರೂ ಮಾಡುವುದಕ್ಕೆ ಒಂದು ಕೆಲಸ ಸಿಕ್ಕಿತಲ್ಲ ಇನ್ನೇನು ?" ಅಂದರಂತೆ.

ಕೊಟ್ಟಿಗೆ ಸುಟ್ಟವರು ಯಾರು?

ಮೊನ್ನೆ ಒಂದು ವಿಚಿತ್ರ ಸಂಗತಿ ನಡೀತು; ಒಬ್ಬಟ್ಟು ಕೃಷ್ಣಾಚಾರಿಮನೇಲಿ. ಒಬ್ಬಟ್ಟು ಎಂದು ಕೇಳಿ ಅವನು ಉಡುಪಿಯವನು ಎಂದು ತಿಳಿದುಕೊಳ್ಳಬೇಡಿ! ಅದು ಪ್ರೀತಿಯಿಂದ ಗೆಳೆಯರು ಹಾಸ್ಟಲಿನಲ್ಲಿ ಅವನಿಗೆ ಇಟ್ಟಹೆಸರು. ಹಳೆಯ ಕಥೆ—ಅವನು ಪ್ರಿಫೆಕ್ಟಾಗಿದ್ದಾಗ ಐದಾರು ಸಲ ಒಬ್ಬಟ್ಟು ಮಾಡಿಸಿ, ಹತ್ತೋ ಹದಿನೈದೊ, ಅವನು ರೂಮಿಗೆ ಸಾಗಿಸಿದ್ದೇ ಕಾರಣ. ಹೆಸರೇನೋ ಕೃಷ್ಣಾಚಾರಿ—ಆದರೂ ಅವನೇನು ಯಾವ ನಾಗರೀಕನಿಗೂ ಕಡಮೆ ಇರಲಿಲ್ಲ. ಅವನಿದ್ದ ರೂಮಿಗೆ ಹೋಗಿ ನಿಮ್ಮ ಮೂಗನ್ನೊಡ್ಡಿ—ಹಾಸ್ಟಲು ಬಿಟ್ಟು ಹತ್ತು ವರ್ಷನಾದರೂ, ಇನ್ನೂ ಚುಟ್ಟದ ವಾಸನೆ "ಗಂ" ಅಂತ ಬರುತ್ತೆ. ಹುಂ ಅದೂ ಒಂದು ಕಾಲ....ಆದರೆ ವಿಧಿ ದೇವತೆ ವಾಸ....ಅವನನ್ನು ಚುಟ್ಟದಿಂದ ತುಂಡು ಬೀಡಿಗಿಳಿಸಿದಳು; ಮಾವನವರು ಮದುವೆಯಲ್ಲಿ ಕೊಟ್ಟ ಚಿನ್ನದ ಕೈ ಗಡಿಯಾರವನ್ನೂ ಸೇದಿಯೇ ಬಿಟ್ಟ.... ಸೂಟುಗಳೆಲ್ಲಾ ಹೊಗೆಯಾಗಿ, ಏಕಾಂಗಿಯಾಗಿಯೇ ಬೀದಿಬೀದಿ ಅಲೆಯಬೇಕಾಗಿ ಬಂತು....ಆದರೂ ಹೇಗೋ ಈಚೆಗೆ ಪರಮಾತ್ಮ ಕೈಹಿಡಿದು ಮೇಲೆತ್ತಿದ...ಅವನನ್ನು ಬಿಟ್ಟು ಓಡಿ ಹೋದ ಸಿಗರೇಟುಗಳು ಮತ್ತೆ ಹಿಂತಿರುಗಿದವು...ಈಗ ಅವನೇ ನನ್ನ ಹೊರೆ....ನಾನು ಅವನ ನೆರೆ....

ಮೊನ್ನೆ ಅಕಸ್ಮಾತ್ತಾಗಿ ಕೃಷ್ಣಾಚಾರಿ ಮನೆಗೆ ಬೆಂಕಿ ಬಿತ್ತು; ಅಂದರೆ ಮನೆ ಹಿಂದೆ ಇದ್ದ ಹಸು ಕೊಟ್ಟಿಗೆಗೆ ಬೆಳಿಗ್ಗೆ ಹಳೇ ಗಡಿಯಾರದ ಪ್ರಕಾರ ಹತ್ತುಗಂಟೆ ಸಮಯ. ನಾನು ಎದ್ದು....ಕಾಫೀ ಕುಡಿಯುತ್ತಾ ಇದ್ದೇನೆ....ಓಡಿ ಬಂದಳು....ನನ್ನ ಪದ್ದು....ಅಣ್ಣಾ ಅಣ್ಣಾ ಪಕ್ಕದಮನೇಗೆ ಬೆಂಕಿ ಬಿದ್ದಿದೆ....ಅಣ್ಣಾ ಕೂಡಲೇ ಓಡಿದೆ ....ಅವರ ಮನೆ ಕಡೆಗೆ!

"ನೀರು ತನ್ನಿ ನೀರು....ಬೇಗ ಬೇಗ....ಇಲ್ಲಿ ಇಲ್ಲಿ....ಇಲ್ಲಿ ಸ್ವಾಮಿ....ಇಲ್ಲಿ ಉರೀತಾ ಇದೆ....ಏನ್ರೀ ಕತ್ತೆ ನಿಂತಹಾಗೆ ನಿಂತಿದೀರಾ....ಹೋಗ್ರೀ....ನೀರು ತನ್ರೀ ....ಹಗ್ಗ....ಹಗ್ಗ ಇದೆಯೇನು ಸ್ವಾಮೀ....ಓ....ಹೋ....ಅಲ್ಲಿ ಹೊಗೆ....'' ಅವಾಂತರವೋ ಅವಾಂತರ; ಗಲಭೆಯೋ ಗಲಭೆ ಬೀದಿಯ ಜನರೆಲ್ಲಾ ತಮಾಷೆ ನೋಡುವುದಕ್ಕೆ ಹಾಜರ್....ಬಿ ಎ. ಮುಗಿಸಿ ಮನೆಯಲ್ಲಿ ಕುಳಿತಿದ್ದ ನಮ್ಮ ಬೀದಿ ಧಾಂಡಿಗರು ಕೃಷ್ಣಾಚಾರ್ರ ಸಹಾಯಕ್ಕಾಗಿ ಅತ್ತಂದಿತ್ತ ಅಡ್ಡಾಡುತ್ತಿದ್ದರು. ಅದೃಷ್ಟವಶಾತ್ ಕೃಷ್ಣಾಚಾರ್ರ ಕಾಮಧೇನುಗಳು ಗಾಳಿಸೇವನೆಗಾಗಿ ಹೊರಗೆ ಹೋಗಿದ್ದವು!

ರಸ್ತೆಯಲ್ಲೆಲ್ಲಾ ಪಾದಚಾರಿಗಳು ನಿಂತು ತಮಾಷೆಯನ್ನು ನೋಡುತ್ತಿದ್ದರು. ಪ್ರತಿಯೊಬ್ಬರೂ ತಮ್ಮದೇ ಆದ ಒಂದು ಬುದ್ಧಿವಂತಿಕೆಯ ಸಲಹೆಯನ್ನು ಅರಚುತ್ತಿದ್ದರು. ಸೌದೆ ಎಳೆದುಹಾಕ್ರೀ...ಒದ್ದೆ ಬಟ್ಟೆಯನ್ನು ಹಿಂಡ್ರೀ....ಇಲ್ಲಿ ಹುಯ್ರೀ.... ಮನೇಗೂ ಬೆಂಕಿ ಬಿದ್ರೆ ಕಷ್ಟ....ಹಾಸಿಗೆ ಎಳೆದು ಹಾಕ್ರೀ ಹೊರಕ್ಕೆ...ತೆಂಗಿನ ಮರ

ಹತ್ರಿ ಅಲ್ಲಿಂದ ಹುಯ್ರೀ ನೀರ್ನ...'' ಎಂದು ಮುಂತಾಗಿ ಚರ್ಚೆಗಳು; ಬಾಯೇಟು ಗಳು !

ಕಷ್ಣಾಚಾರಿಗಂತೂ, ಎಂದೂ ಇಲ್ಲದ ಸಡಗರ. ಪರದಾಟವೋ ಪರದಾಟ.... ಅಲ್ಲಿಂದಿಲ್ಲಿಗೆ ಓಡಾಟ. ಯಾವತ್ತು ತನ್ನ ಮನೆಗೆ ಬರದೆ ಇದ್ದರೂ, ಇವತ್ತಾದರೂ ಇಷ್ಟು ಜನ ತನ್ನ ಕುಟೀರದೊಳಕ್ಕೆ ಕಾಲಿಟ್ಟು....ತನ್ನೊಂದಿಗೆ ಸಹ ತಪಿಸುತ್ತಿರುವ ರಲ್ಲಾ ಎಂದು ಒಂದುಕಡೆ ಸಂತೋಷ....ಇನ್ನೊಂದು ಕಡೆ ಉರಿಯುತ್ತಿರುವ ಕೊಟ್ಟಿ ಗೆಯನ್ನು ಕಂಡು ವ್ಯಸನ...ಬಾಯಲ್ಲಿ ಒಂದು ಸಿಗರೇಟನ್ನು ಕಚ್ಚಿಕೊಂಡು, ಇತರರಿಗೆ ಸಲಹೆಗಳನ್ನು ಕೊಡುತ್ತಾ ಓಡಾಡುತ್ತಿದ್ದ.

''ಏನಿದು ಕೃಷ್ಣಾಚಾರ್ರೇ.... ?''

''ಅಯ್ಯೋ ನೋಡೀಂಡ್ರೇ....ಪೇಪರ್ ಓದ್ತಾ ಕುಳಿತಿದ್ದೆ....ಇದ್ದಕ್ಕಿದ್ದ ಹಾಗೆ ಬೆಂಕಿ ಬಿದ್ದು ಬಿಟ್ಟಿದೆ....ಯಾರೋ ಪೋಕ್ರಿಗಳ ಕೆಲಸ....ಇರಬೇಕು....ಇರಬೇಕು....

ಬೆಂಕಿ ಆರಿಸುವುದಕ್ಕೆ ಅಳಿಲುಸೇವೆಯೂ ನಡೆಯುತ್ತಿತ್ತು. ಕೃಷ್ಣಾಚಾರ್ಯರ ಕನಿಷ್ಟ ಪುತ್ರಿ ತಾನು ಆಡುತ್ತಿದ್ದ ಕುಡಿಕೆಯಲ್ಲಿ ನೀರುತಂದು, ತಂದೆಯ ಕೈಯಲ್ಲಿ ಕೊಡುತ್ತಿದ್ದಳು. ಕೃಷ್ಣಾಚಾರ್ಯರ ತೀರ್ಥರೂಪುಗಳಿಗೆ ಮಾಡುತ್ತಿದ್ದ ಆಯುಷ್ಕ ರ್ಮಿಯು ತನ್ನ ಅಲ್ಯುಮಿನಿಯಂ ಬಟ್ಟಲನ್ನೂ ಆರಿಸುವುದಕ್ಕೆ ಉಪಯೋಗಿಸುತ್ತಿ ದ್ದುದು ಕಂಡು ಬಂತು.

ಅಂತೂ ಇಂತೂ ಮಹಾಜನಗಳ ಸಹಾಯದಿಂದ ಬೂದಿ ಆರಿಸಿದ್ದಾಯಿತು....| ಹಸು ಕೊಟ್ಟಿಗೆ ಮಾತ್ರ ಸಂಪೂರ್ಣವಾಗಿ ಭಸ್ಮವಾಯಿತು.

ಒಬ್ಬರು ಸಂಶಯಾತ್ಮರು ''ರೀ ಕೃಷ್ಣಾಚಾರ್ರೇ....ಅಂದಹಾಗೆ....ನೀವೇ ಅಲ್ವೇನ್ರೀ ಹಾಕಿದ್ದು ಬೆಂಕಿ...." ಅಂದರು. ಕೃಷ್ಣಾಚಾರ್ರು ಬೆರಗಾದರು........ ಕೋಪದಿಂದ ಮುಸಿಹಿಡಿದ ಮೂಗೂ ಕೆಂಪಗಾಯಿತು....''ನೀವೇ ಹಾಕಿರಬೇಕು.... ಎಲ್ಲೋ ಸಿಗರೇಟು ಸೇದಿ ಗೊತ್ತಿಲ್ಲದೆ ಬಿಸಾಕಿ ಬಿಟ್ಟಿದೀರಿ ಅಷ್ಟೇ...." ಅಂದ್ರು. ಕೃಷ್ಣಾಚಾರಿಗೆ ಇರಿದಂತಾಯಿತು.

"ಏನ್ರೀ....ನಿಮಗೆ ಬುದ್ಧಿ ಇದೆಯೋ ಇಲ್ಲವೋ....ಹದಿನೈದು ವರ್ಷದಿಂದ ನಾನೂ ಸಿಗರೇಟು ಸೇದ್ತಾ ಇದಾನೆ....ಇದುವರೆಗೂ ಯಾವ ಅನಾಹುತವೂ ಆಗಿಲ್ಲ ...." ಎಂದು ರೇಗಿ....ಒಂದು ಸಿಗರೇಟನ್ನು ಅವರೆದುರಿಗೇ ಸೇದಿ ತನ್ನ ಕೈಚಳಕ ವನ್ನು ತೋರಿಸಿದ.

"ಇಲ್ರೀ....ನನಗೇನೋ ಅನುಮಾನವೇ....ಎಲ್ಲೋ ನಿಮ್ಮ ಸಿಗರೇಟಿನ ಚೂರೇ ಇರಬೇಕು........" ಎಂದು ಎಲ್ಲೆಲ್ಲೂ ಮಾತುಗಳು ಪ್ರಾರಂಭವಾದುವು. "ಹುಷಾ ರಾಗಿ ಸೇದಿ ಅಪ್ಪ....ಇನ್ಮೇಲೆ....ನೋಡಿ ಕೊಂಡು....ಎಸೆಯಿರಿ, ಇಂತಹ ದುರಭ್ಯಾ ಸಗಳೆಲ್ಲಾ ಬಿಟ್ಟು ಬಿಡಬೇಕು ಅಂತ ಅದಕ್ಕೆ ದೊಡ್ಡೋರು ಹೇಳೋದು....ಆದರೆ ನೀವು ಹುಡುಗರು ಕೇಳ್ತೀರಾ...." ಎಂದು ಮುದುಕರೊಬ್ಬರು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ಅದುವರೆಗೂ ಶಾಂತಚಿತ್ತರಾಗಿ ಪರಾಂಬರಿಸುತ್ತಿದ್ದ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ "ಕೃಷ್ಣಾಚಾರ್....ಇಲ್ಲಿ ಬನ್ನಿ ಇಲ್ಲೀ....ಸಿಗರೇಟು ಸೇದಿ ಎಸೆಯುವಾಗ ಇನ್ಮೇಲೆ ಬುದ್ಧಿ ನೆಟ್ಟಗಿರಲಿ....ಗೊತ್ತಾಯಿತೆ ?....ಇವತ್ತೇನೋ ನಿಮ್ಮ ಕೊಟ್ಟಿಗೆ....ಪರವಾಗಿಲ್ಲ....ನಾಳೆ ಪಕ್ಕದ ಮನೇಗೆ ಬೆಂಕಿ ಇಟ್ಟೀರಿ....ಹುಷಾರ್ ಎಂದು ಹೆದರಿಸಿ ಹೊರಟೇ ಹೋದರು.

—ಮೂರ್ತಿ

ಕೊರವಂಜಿಯೇರು

(ಶ್ರೀ ರಂ. ಶ್ರೀ ಮುಗುಳಿಯವರಲ್ಲಿ ಕ್ಷಮಾಪಣೆಗಳೊಡನೆ)

ಬಂದಾರ ತಂದಾರ ಕಸಬರಗಿ ಕೈಯಾಗ
ನಂದೂರ ಗ್ರಾಮದ ಕೊರವಂಜಿಯೇರು
ಬಂದಾರ ಕೋಳಿರೋ ಕಸಬರಿಗೆಯೆಂದು
ಅಂದಾರ ನಂದೂರಿನಂದುಗೆಯ ಚೆಲುವೇರು

೨

ಅಂದಾದ ಬುಟ್ಟೀಯ ತಲೆಯ ಮೇಲಿಟ್ಟು
ನಿಂದಾರ ಒದರುತ "ಕೊರಕೊರನೆ" ಚೆಲುವೇರು
ಬಂದಾರ ಕೊಳಿರೋ ಕಸಬರಿಗೆಯೆಂದು
ನಿಂದಾರ ನಂದೂರ ಗ್ರಾಮದ ಕೊರವೇರು

[೩]

ಕಸದ ರಾಯನ ಹಿರಿ ಪೊರಕೆಯೆಂದು
ದೇಶವ ತಿರುಗಿದರು. ಕೊರವಂಜಿಯೇರು
ಕಸವುಡುಗಿ ಬಿಡುವರು ಸೊಗಸಿಲ್ಲವೆಂದು
ಲೇಸೆಂದು ಕೊಳ್ಳುವರಾರಿಲ್ಲೊ ಜಗದಾಗ


[೪]

ನಿಂದಾರ ಕಾಲ್ಕಿಸಿದು ತೆರದಾರ ಹಲ್ಲಾ
ಹೊಂದ್ಯಾರ ಮಾರಿಯ ಅವತಾರವನ್ನು
ಅಂದಾದ ಪೊರಕೆಯ ಕೈ ಮೇಲೆಮಾಡಿ
ಅಂದಾರೊ ರೋಷದಿ ನಂದೂರ ಕೊರವೇರು

[೫]

ಅಂದಾರ ಭುವನದ ಜನತೆಲ್ಲ ಸಾರಿ
"ಅಂದಾದ ಕಸಬರಗಿ ಒಂದನ್ನು ಕೊಳಲಿಲ್ಲ
ಒಂದನ್ನು ಕೊಳಲಿಲ್ಲ ಲೋಕದ ಜನ ನೀವು
ಸಂದಿರಲಿ ನಿಂಮನೆಯ ಬಲುಕಸವೆಂದೇನೊ?"

—ಶ್ರೀ ಕೃಷ್ಣತನಯ.



''ಏನು ಮಳೆಗಾಳಿಯಪ್ಪ''!

ಅಮ್ಮನೋರ ಅರ್ಚಕ

ಕಣಿವೆ ಕೆಳಗಿನ ದೇಶಗಳಲ್ಲಿ ಮೈಲಿ ಮೈಲಿಗೂ ಒಂದೊಂದು ಪುರಾತನ ದೇವಸ್ಥಾನ. ಅದಕ್ಕಾಗಿಯೇ ಅಲ್ಲಿ ಮೈಲಿಗೆ ಹೆಚ್ಚಿದ್ದಿರಬೇಕು. ಅಲ್ಲದೆ ಹೋದರೆ ಅಷ್ಟು ದೇವಸ್ಥಾನಗಳೇಕೆ ? ಎಂದು ಅನುಮಾನ ಬಂದೇ ಬರುವುದು. ಒಂದೊಂದು ದೇವಸ್ಥಾನದಲ್ಲಿಯೂ ಒಂದು ಗಂಡು ದೇವರು. ಪಕ್ಕದಲ್ಲೇ ಒಂದು ಹೆಣ್ಣು ದೇವತೆ. ಆದರೆ ಒಂದು ಸ್ವಾತಂತ್ರ್ಯ ದೇವಸ್ಥಾನದ ಹಣ್ಣು ದೇವತೆಗೆ. ಆಕೆಗೆ ಬೇರೊಬ್ಬ ಅರ್ಚಕ. ಗಂಡು ದೇವರಿಗೆ ಒಬ್ಬ ಅರ್ಚಕ. ಹಣ್ಣು ಕಾಯಿ ಪೂಜೆ ಪುನಸ್ಕಾರಗಳನ್ನು ಮಾಡುವ ಭಕ್ತಾದಿಗಳೆಲ್ಲರೂ ಈಶ್ವರನ ಅರ್ಚಕನ ಹತ್ತಿರ ಒಮ್ಮೆ ಪೂಜೆ ನಡೆಸಬೇಕು. ಅನಂತರ ಅಮ್ಮನೋರ ಅರ್ಚಕನ ಹತ್ತಿರ ಒಮ್ಮೆ ಪೂಜೆ ನಡೆಸಲೇಬೇಕು. ಇದು ಲಾಗಾಯಿತಿನಿಂದ ಬಂದ ವಾಡಿಕೆ.

ಕಾವೇರಿ ತೀರದಲ್ಲಿ ಒಂದು ಊರಿನಲ್ಲಿ ನಂಜುಂಡೇಶ್ವರನ ದೇವಾಲಯವಿದೆ. ಇಲ್ಲಿನ ಮಹಾತ್ಮ್ಯೆಯೇನೆಂದರೆ ಎಳುವು ಬರುವ ಮಕ್ಕಳು ಇಲ್ಲಿಗೆ ಬಂದು ಚೌಲಮಾಡಿಸಿಕೊಂಡರೆ ಎಳವು ನಿಂತು ಹೋಗುವುದಂತೆ ಭವರೋಗ ವೈದ್ಯನಲ್ಲವೇ ! ನಂಜುಂಡೇಶ್ವರ ! ನೀವು ಹೇಳಬಹುದು ಇದು ಹೆಣ್ಣು ಮಕ್ಕಳಿಗೂ ಅನ್ವಯಿಸುತ್ತದೆಯೇ ಎಂದು ಹೌದು ! ಹೆಣ್ಣಾಗಲಿ ಗಂಡಾಗಲಿ ಎಳವು ನಿಲ್ಲಬೇಕಾದರೆ ಈ ಊರಿನ ದೇವಾಲಯದ ನಾಪಿತನ ಹತ್ತಿರ ತಿರುಪತಿ ಮಾಡಿಸಿಕೊಳ್ಳಲೇ ಬೇಕು. ನಮ್ಮ ಅಜ್ಜಿಗೆ ಈ ದೇವಾಲಯದ ದೇವರಲ್ಲಿ ಬಹಳ ಭಕ್ತಿ, ಮಮತೆ. ನನ್ನ ಕಿರಿಮಗನಿಗೆ ಹುಟ್ಟಿದ ವರುಷದಲ್ಲೇ ವಾಯು ಬರಲು ಆರಂಭ. ನಮ್ಮಜ್ಜಿ ಅರಿಸಿಕೊಂಡಳು ನಂಜುಂಡೇಶ್ವರನ ಹತ್ತಿರ ಬಂದು ಅವನ ಸಾನ್ನಿಧ್ಯದಲ್ಲಿ ಮೊಮ್ಮಗನಿಗೆ ತಲೆ ಬೋಳಿಸುವೆನೆಂದು ಇದು ದೇವರಿಗೆ ಕೇಳಿಸಿತೊ-ದೇವರು ಈ ಲಂಚಕ್ಕೆ ಸಂತುಷ್ಟನಾದನೊ ಏನೊ-ಅಂತು ಮಗುವಿಗೆ ವಾಯು ಬರುವುದು ನಿಂತುಹೋಯಿತು. ಹುಡುಗನಿಗೆ ಐದು ವರ್ಷ ಆದ ಕೂಡಲೆ ಅಜ್ಜಿಯ ಹರಕೆಯನ್ನು ಸಂಪೂರ್ಣ ಮಾಡಲೋಸುಗ ಎಲ್ಲರೂ ಕಾವೇರಿ ತೀರದ ಊರಿಗೆ ಹೊರಡಲು ಸಿದ್ಧರಾದೆವು. ಹೆಂಡತಿಯ ಹೊಸ ಸೀರೆಗಳೆರಡನ್ನು ಕೊಂಡಳು, ಪ್ರಯಾಣದ ಸಿದ್ಧತೆಯ ನೆಪದಿಂದ. ಚೌಲದ ನೆಪದಿಂದ ಹುಡುಗನಿಗೆ ನೀಲಿ ಮುಖಮಲ್ಲಿನ ಅಂಗಿ ಹೊಲಿಸಿದಳು. "ಚೌಲಕ್ಕೆ ಹೋಗುವವರು ನನ್ನನ್ನು

ನೋಡಿದರೆ ಆ ಊರಿನವರು ಒಂದು ರೂಪಾಯಿ ವಸೂಲ್ಮಾಡಿ ಬಿಡುತ್ತಾರೆ ಅದಕ್ಕಾಗಿಯೇ ಇಲ್ಲಿಯೇ ತಲೆ ಮಾಡಿಸಿಕೊಂಡು ಬಿಡುತ್ತೇನೆ" ಎಂದು ಅಜ್ಜಿಯೂ ಅ[illegible]ಮಾಡಿಕೊಂಡಳು. ನಾನೂ ಸೊಸೈಟಿಗೆ ಹೋಗಿ ರಾಜನ ತಲೆಯ ಮೇಲೆ ರುಜು ಹಾಕಿ ಸಿದ್ಧ ಮಾಡಿಕೊಂಡೆ.

ಎಲ್ಲರೂ ಹೊರಟೆವು. ಎಲ್ಲರಂತೆ ಕಾವೇರಿ ತೀರದ ಊರನ್ನೂ ಸೇರಿದೆವು. ಅಲ್ಲಿನ ಛತ್ರದಲ್ಲಿ ಇಳಿದುಕೊಂಡೆವು. ನದಿಗೆ ಹೋಗಿ ಸ್ನಾನಮಾಡಿಕೊಂಡು ಚದುರ ಶಿಖೆಯನ್ನು ಕಟ್ಟಿಕೊಂಡು, ದೇವಾಲಯದ ಬಳಿಗೆ ಹೊರಟೆವು. ಅಲ್ಲಿನ ನಾಪಿತನನ್ನೂ ಬ್ರಾಹ್ಮಣನನ್ನೂ ಒಟ್ಟುಗೂಡಿಸಿ ಮಗನಿಗೆ ಕಲ್ಲುಸಕ್ಕರೆ ತಿನ್ನಿಸುತ್ತಾ ಚೌಲಮಾಡಿಸಿದ್ದು ಆಯಿತು. ಇಷ್ಟು ಹೊತ್ತೂ ನನ್ನ ಹೆಂಡತಿಯು ಅಲ್ಲಿಯೇ ಮಾರಾಟಕ್ಕೆ ಇದ್ದ ಬಿಡಿ ಹೂವು ಕೊಂಡುಕೊಂಡು ಅಣಿಯಾದ ದಂಡೆಯೊಂದನ್ನು ಕಟ್ಟಿದ್ದಳು. ಅವಳೂ ಹರಕೆ ಹೊತ್ತಿದ್ದಳಂತೆ-ಮಗನಿಗೆ ವಾಯು ನಿಂತರೆ ಅಮ್ಮನವರಿಗೆ ಅಷ್ಟೋತ್ತರ ಕುಂಕುಮಾರ್ಚನೆ ಮಾಡಿಸುತ್ತೇನೆಂದು—ಅದನ್ನು ಚೌಲವಾದ ಮೇಲೆ ಹೇಳಿದಳು. ಸರಿ ನಡೆಯುವಾಗ ನಡೆದೇ ಹೋಗಲಿ-ಅದೇ ದೇವರು ಇನ್ನು ಮೇಲೆ ಎಂದಿದ್ದರೂ ಹುಲ್ಲು ಮೇಯಿಸಿಯೇ ಬಿಡುತ್ತಾನೆ ಎಂದಂದುಕೊಂಡು ಅವನ ಮೇಲೇ ಭಾರ ಹಾಕಿ ಒಪ್ಪಿಕೊಂಡೆ.

ಚೌಲವಾದ ಮೇಲೆ ಮಂಗಳ ಸ್ನಾನ ಮಾಡಿಸಿ ಎಲ್ಲರೂ ಗುಡಿಗೆ ಹೋದೆವು. ನಂಜುಂಡೇಶ್ವರನ ಪೂಜೆಯು ಅರ್ಚಕನಿಂದ ಸಾಂಗವಾಗಿ ನೆರವೇರಿತು. ನಂತರ 'ಅಮ್ಮ'ನವರ ಪೂಜೆಗೆಂದು ಅಲ್ಲಿಗೆ ಹೋದೆವು. ಅಲ್ಲಿನ ಅರ್ಚಕನನ್ನು ನೋಡಿ ನನಗೆ ಸಾಕ್ಷಾತ್ತಾಗಿಯೂ ಭಕ್ತಿಉಂಟಾಯಿತು. ಕೊರಳಲಿ ಹೊಳೆವ ಚಿನ್ನದ ರುದ್ರಾಕ್ಷಿ—ಹಣೆಯಲಿ ಬೆಳಗುವ ವಿಭೂತಿಯ ಮೇಲೆ ಅಂದದ ಅಚ್ಚ ಕುಂಕುಮದ ಬಟ್ಟು-ಭಟ್ಟ ತಲೆ, ಸ್ಫುಟವಾದ, ಆಯುಷ್ಯರ್ಮಿಸಿದ ಪ್ರಾಜ್ವಲ್ಯ ಮುಖ, ಕೆಂಪು ಮುಗುಟವನ್ನು ಸೊಂಟಕ್ಕೆ ಸುತ್ತಿದ್ದಾನೆ. ಕುಂಕುಮಾರ್ಚನೆಯನ್ನು ಮಾಡಲೋಸುಗ ದೇವಿಯ ಒಂದೊಂದು ಹೆಸರನ್ನೂ ಸ್ಫುಟವಾಗಿ ಉಚ್ಚರಿಸಿದನೆಂದರೆ 'ಅಮ್ಮನವರೇ' ಸಾಕ್ಷಾತ್ತಾಗಿ ಬಂದಂತೆಯೇ ಭಾವನೆಯುಂಟಾಗುತ್ತಿತ್ತು. ಕುಂಕುಮಾರ್ಚನೆಯು ಆಯಿತು. ನನ್ನ ಹೆಂಡತಿಯು ತಾನು ಪ್ರೀತಿಯಿಂದ ಕಟ್ಟಿದ ಹೂವಿನ ದಂಡೆಯನ್ನು 'ಅಮ್ಮ'ನವರಿಗೆ ಅರ್ಪಿಸಿದಳು. ಮಂಗಳಾರತಿಗೆ ನಾನು ಭಕ್ತಿ ಉನ್ಮಾದಕನಾಗಿದ್ದುದರಿಂದ ಒಂದು ಬೆಳ್ಳಿಯ ರೂಪಾಯಿಯನ್ನೇ ಹಾಕಿದೆ. 'ಅಮ್ಮ'ನವರ ಅರ್ಚಕನ ವಿಷಯವಾಗಿಯೇ ಮಾತನಾಡುತ್ತ ಹಿಂತಿರುಗಿ ಛತ್ರಕ್ಕೆ ಬಂದೆವು.

"ಆಹಾ! ಏನು ಸೊಗಸಾಗಿ ದೇವಿಯ ಅಷ್ಟೋತ್ತರವನ್ನು ಹೇಳಿದ"

"ದೇವಿಯು ಅವನ ನಾಲಿಗೆಯ ಮೇಲೆಯೇ ಸುಳಿದಾಡುತ್ತಿರುವುದೇ ಮುಖಕ್ಕೆ"

"ಮಡಿ ಮೈಲಿಗೆ ಸ್ವಲ್ಪ ಹೆಚ್ಚು ಕಡಿಮೆಯಾದರೂ ದೇವಿಯು ಸಹಿಸಳು. ಬಹಳಕ್ರೂರ ಅಮ್ಮನವರು, ಹಾಗಿದ್ದರೂ ಅರ್ಚಕನು ಅಲ್ಲಿ ಹತ್ತಾರು ವರ್ಷಗಳಿಂದ ಅಲ್ಲಿಯೇ ಇರುವನಂತೆ"

ಈ ರೀತಿ ನಮ್ಮ ನಮ್ಮಲ್ಲೀ ಮಾತುಕತೆಗಳು ನಡೆದುವು. ನಾವು ಮಧ್ಯಾಹ್ನ ಊಟಮಾಡುತ್ತಿರುವಾಗ ಮತ್ತು ಅನಂತರ ಹಜಾರದಲ್ಲಿ ಮಲಗಿ ಹೊರಳುತ್ತಿದ್ದಾಗ.

* * *

ಮಾರನೆಯ ದಿನ ಬೆಳಿಗ್ಗೆ ಛತ್ರವನ್ನು ಗುಡಿಸುವುದಕ್ಕೋಸ್ಕರ ಒಬ್ಬ ಶೂದ್ರಗಿತ್ತಿಯು ಬಂದಳು. ನಾವೆಲ್ಲಾ ಬೇಗ ಬೇಗ ಎದ್ದೆವು ಕೊಠಡಿಯನ್ನೂ ಗುಡಿಸಿಹೋಗಲೆಂದು ನಾನು ಕೊಠಡಿಯ ಹೊರಗಡೆ ಬಂದೆ. ದೂರದಲ್ಲಿಯೇ ಪೊರಕೆ ಮೊರದಿಂದ ಸುಸಜ್ಜಿತಳಾದ ಶೂದ್ರಗಿತ್ತಿ. ತಲೆಯಲ್ಲಿ ದಂಡೆಯ ಹೂವು ಮುಡಿದಿದ್ದಳು. ಬಾಡಿದ ದಂಡೆಯ ಹೂ. ನಾನು ನನ್ನ ಹೆಂಡತಿಯನ್ನು ನೋಡಿ ಸನ್ನೆಮಾಡಿದೆ. ಆಕೆಯೂ ಶೂದ್ರಗಿತ್ತಿಯನ್ನು ನೋಡಿದಳು.

ಕಸಗುಡಿಸಾದ ಮೇಲೆ ಒಬ್ಬರನೊಬ್ಬರು ಒಮ್ಮೆಲೇ ಕೇಳಿದೆವು "ನೀನು ಕಟ್ಟಿದ ಹೂವಿನ ದಂಡೆಯಲ್ಲವೇ"ನಾನೇ ಕಟ್ಟಿದ್ದ ಹೂವಿನ ದಂಡೆ ಅಮ್ಮನವರಿಗೆ ಪೂಜೆಗೆ ಕಟ್ಟಿದ್ದು ಮತ್ತೆ ಈ ಶೂದ್ರಗಿತ್ತಿಗೆ ಹೇಗೆ ಸಿಕ್ಕಿತು? "ನನಗೇನು ಗೊತ್ತು"

* * *

ಆ ದಿನ ಸಾಯಂಕಾಲ ಆ ಊರಿನ ಹೋಟಲಿಗೆ ಹೋದೆ. ಹೋಟಲಮಾಣಿಯ ಹತ್ತಿರ ಅದು ಇದು ಮಾತನಾಡುತ್ತ ಅಮ್ಮನೋರ ಅರ್ಚಕನ ಮಾತೆತ್ತಿದೆ. ಹೊಟಲಮಾಣಿಯು ಆತ ನನ್ನು ಹೊಗಳಿದ್ದೇ ಚೆನ್ನ. "ಆಹಾ ಸಾಕ್ಷಾತ್ ರುದ್ರರೂಪಿ ಆತ ಅಮ್ಮನವರ ಅರ್ಚಕ ಎಂದರೆ ದಿಟವಾಗಿಯೂ ಅಮ್ಮನೋರ ಅರ್ಚಕನೇ. ಮನೆ ಶೂದ್ರಗಿತ್ತಿಗೆ ಹತ್ತು ರೂಪಾಯಿ ಸಂಬಳ ಕೊಡುತ್ತಾನಂತೆ. ಈ ಕಾಲದಲ್ಲಿ ಎರಡು ರೂಪಾಯಿಕೊಡುತ್ತಾರೆ. ಈತಹತ್ತು ರೂಪಾಯಿಕೊಡುತ್ತಾನೆ" ಇತ್ಯಾದಿ

* * *

ಎಷ್ಟೇಆಗಲಿ ಅಮ್ಮನೋರ ಅರ್ಚಕ ಏನೇ ಅಗಲಿ ಅಮ್ಮನವರ ಸಜೀವ ದರ್ಶನವೇ ಆಯಿತು.

ಅಗಸನ ಕತ್ತೆಯನ್ನು ಕದ್ದವನೊಬ್ಬನು ನಾಯಾಸ್ಥಾನದಲ್ಲಿ ಸ್ವಾಮಿ ಈ ಕತ್ತೆಯು ದೊಂಬರಿಗೆಬೇಕಾಗಿತ್ತು ಅದಕ್ಕಾಗಿ ತೆಗೆದು ಹೋಗುತ್ತಿದ್ದೆ ಎಂಬ ನೆಪವು ಸಾರ್ಥಕವಾಗಲಿಲ್ಲವಂತೆ.

ಒ ಮ್ಮೆ

"ಖಾಸ್ ಬಂಗಲೆಯಲ್ಲಿ ಒಮ್ಮೆ ನಾ
ಕಾಮುದರಸಿಯನು ಮುತ್ತಿಟ್ಟೆ.
ಕಾವಲುಗಾರನು ರೇಗಿ ರೇಗಿ
ಹೀಗೆ ಮಾಡಬಾರದಿಲ್ಲಿ ಎಂದ.

ಆದರೇನು?
ಕೊಕ್ಕರೆಯು ನವಿಲುಗಳು
ಚಿಕ್ಕ ಹಕ್ಕಿ ಬಕ ಪಕ್ಷಿಗಳು
ಎಲ್ಲವೂ ನೋಡುತ ನೋಡುತ
'ಎಷ್ಟು ಅಂದ' 'ಎಷ್ಟು ಚಂದ' ಅಂದುವು.

ಹುಲಿ ಯಾಗ ನಿಲ್ಲಿಸಿತು ಆರ್ಭಟನೆಯ
ಸಿಂಹದ ಗಂಟಲದು ತಾನಾಗಿ ಒಣಗಿತು.
ಮೊಸಳೆಯದು ಬಿಸುಸುಯ್ದು ತಣ್ಣಗಾಯ್ತು.
ಮುಳ್ಳ ಹಂದಿ ಮೈಯೆಲ್ಲಾ ನುಣ್ಣಗಾಯ್ತು.

ನೋಡಲಿಕೆ ಬಂದವರು ನಮ್ಮನ್ನೆ ನೋಡಿದರು
ಹಾವನ್ನು ಜೇನನ್ನು, ಆನೆಯನು ಕೋಣನನು
ನೋಡುವುದ ಬಿಟ್ಟರು ನಮ್ಮನ್ನೆ ನೋಡಿದರು
ಕೈ ತೋರಿ ಕೂಗಿದರು 'ಸೋಜಿಗವ ನೋಡಿ'ರೆಂದು"

“ಷಹರಿನಲ್ಲಿ ಜಗ್ಗೋಜಿ”

●

ಷಹರಿನಲ್ಲಿ ಈ ವರ್ಷ ದಂಡಯಾತ್ರೆ ಎತ್ತಿ ತನ್ನ ಕಳ್ಳತನದ ಚಾತುರ್ದಿನವನ್ನು ನಡೆಸಬೇಕೆಂದು ಜಗ್ಗೋಜಿಯು ನಿರ್ಧಾರಮಾಡಿದನು. ಷಹರಿನಲ್ಲಿ ಮಿಕ್ಕ ಚಿಕ್ಕ ಊರುಗಳಂತೆ ಕನ್ನಹಾಕಿ ಮನದೋಚುವುದು ಸುಲಭವೆಂದು ತಿಳಿದು, ಉಪಾಯದ ಕಳ್ಳತನಕ್ಕೆ ಸರಿಯಾದ ಸಲಕರಣಗಳನ್ನು ತಯಾರಿಸಿಕೊಂಡನು ಹಾಗಾಗಿ ಒಂದೆರಡು ತಿಂಗಳಲ್ಲೇ ಆತನು ಹಾವಾಡಿಗನಂತೆ ಬೇಕಾದರೂ ಸರಿ, ಬುಡುಬಡಿಕೆಯುವನಂತೆಯಾದರೂ ಸರಿ, ಸಕಲವಿದ್ಯಾಪಾರಂಗತನಾದ ಭಟ್ಟನಂತೆಯೂ ಕೈನೋಡಿ ಸಾಮುದ್ರಿಕ ಹೇಳುವ ಜ್ಯೋತಿಷ್ಕನಂತೆಯೂ, ವೇಷಧರಿಸಲು ತಯಾರಾದನು. ವೇಷಕ್ಕೆ ತಕ್ಕ ಆಟಗಳನ್ನೂ ಕಲಿತನು. ಸಕಲವೂ ಸಿದ್ಧವಾದನಂತರ ಒಳ್ಳೆಯ ದಿವಸ ಎಂದು ವಿಜಯದಶಮಿಯ ದಿನ ತನ್ನ ಕಳ್ಳಯಾತ್ರೆಗಾಗಿ ಹಳ್ಳಿಯಿಂದ ಷಹರಿಗೆ ಪ್ರಯಾಣ ಬೆಳೆಸಿದನು.

ಷಹರಿಗೆ ಬರುವ ತನ್ನವರಂತೆಯೇ ಅವನೂ ಬಿಕ್ಷುಕರ ಹಜಾರದಲ್ಲಿ ತನ್ನ ಸ್ಥಳವನ್ನು ಏರ್ಪಡಿಸಿಕೊಂಡನು. ಅಲ್ಲಿ ಅವನಿಗೆ ಒಂದು ಅನುಕೂಲವಿದ್ದಿತು. ಉಳಿದ ಬಿಕ್ಷುಕರ ಮಾತುಕತೆಗಳಿಂದ ಯಾವಾವ ಕೇರಿಯಲ್ಲಿ ಯಾವಾವ ಬೇಟೆಸಿಗುತ್ತದೆ ಎಂಬುದನ್ನು ತಿಳಿಯುವ ಅನುಕೂಲ. ಹಾಗಾಗಿ ಅವರಿವರ ಮಾತುಗಳಿಂದ ರಾಮಾಗ್ರಹಾರದ ನೀಲಿ ಮಹಡಿಮನೆಯಲ್ಲಿ ಇನ್ನು ಒಂದೆರಡು ವಾರಗಳಲ್ಲಿ ಮದುವೆಯೆಂದೂ ಅದಕ್ಕಾಗಿ ಭಿಕ್ಷುಕರೆಲ್ಲರೂ ಆ ಮದುವೆಯ ದಿನಗಳಲ್ಲಿ ಬೇರೆ ಯಾವ ಕೇರಿಗೂ ಹೋಗದೆ ಅಲ್ಲಿಗೇ ಹೋಗಿ ತಮ್ಮ ಕಾರ್ಯತತ್ಪರರಾಗಬೇಕೆಂದು ನಿರ್ಧರಿಸಿದ್ದರೆಂದೂ ತಿಳಿದು ಕೊಂಡನು. ಇದು ತಿಳಿದ ಮಾರನೆಯ ಬೆಳಿಗ್ಗೆಯೇ ರಾಮಾಗ್ರಹಾರಕ್ಕೆ ಹೋಗಿ ಅಲ್ಲಿನ ನೀಲಿ ಮಹಡಿ ಮನೆಯ ಆಧಾನ ನಿಧಾನವನ್ನು ನೋಡಿಕೊಂಡು ಬಂದನು. ಮನೆಯ ಜವಾನನೊಡನೆ ಒಂದೆರಡು ಮಾತನಾಡಿಕೊಂಡು ಹಿಂತಿರುಗಿದನು.

ತನ್ನ ಹಜಾರಕ್ಕೆ ಬಂದ ಕೂಡಲೇ ಮುಂದಿನ ಕಾರ್ಯ ರಚನೆಯನ್ನು ಯೋಚಿಸಿ ಒಂದು ತೀರ್ಮಾನಕ್ಕೆ ಬಂದನು. ಅದೇ ರೀತಿ ಮಾರನೆಯ ದಿನ ವಧೂವರರು ಕೂಡುವ ಮಂಟಪ ಕಟ್ಟುವವನೆಂದು ಹೇಳಿಕೊಂಡು ರಾಮಾಗ್ರಹಾರದ ಮಹಡಿಯ ಮನೆಗೆ ಹೋದನು. ಅಲ್ಲಿ ಯಜಮಾನನನ್ನು ನೋಡಿ ತಾನು ಕಾಗದದ ಮಂಟಪ ಕಟ್ಟುವುದರಲ್ಲಿ ನಿಪುಣನೆಂದೂ ಅವರ ಮನೆಯಲ್ಲಿ ಮದುವೆಯೆಂದು ಕೇಳಿ ತಾನು ಬಂದನೆಂದೂ, ಬಹಳ ಸುಲಭ ದರದಲ್ಲಿ ವಧೂವರರ ಮಂಟಪವನ್ನು ಚಮತ್ಕಾರವಾಗಿ ಕಟ್ಟುವೆನೆಂದೂ ಹೇಳಿಕೊಂಡನು. ಮನೆಯ ಯಜಮಾನನು ಹಳೆಯ ಕಾಲದ ಸೇಂದಿ

ಕಂಟ್ರಾಕ್ಟರು. ಬಡತನದಲ್ಲಿ ಹುಟ್ಟಿ ಐಶ್ವರ್ಯವಂತನಾಗಿದ್ದನು. ಹಣವಂತರಂತೆ ಜರ್ಬು ಅಹಂಕಾರ ಬೇಕು. ಆದರೆ ಹಣ ಖರ್ಚು ಮಾಡಲು ಮನಸ್ಸಿಲ್ಲ. ಅಂತಹ ವನಿಗೆ ಈ ಸಲಹೆ ಬಂದರೆ ಕೇಳಬೇಕೇ? ಕೂಡಲೆ ಒಪ್ಪಿದನು. ಮಾರನೆಯ ದಿನದಿಂದಲೇ ವಿವಾಹ ಮಂಟಪವನ್ನು ತಯಾರಿಸಲು ಆರಂಭವಾಗಬೇಕೆಂದು ಅಸುಜ್ಞೆಯೂ ಹೊರಟಿತು.

ಸರಿ. ಮಾರನೆಯ ದಿನದಿಂದ ಬೆಳಗಾದರೆ ಜಗ್ಗೋಜಿಯು ರಾಮಾಗ್ರಹಾರದ ಮಹಡಿ ಮನೆಯಲ್ಲಿ ಹಾಜರು. ಬೆಳಗ್ಗಿನಿಂದ ಮಧ್ಯಾಹ್ನದವರೆಗೆ ಯಥಾಸಾವಕಾಶವಾಗಿ ತನ್ನ ಕೆಲಸವನ್ನು ಮಾಡುತ್ತ ಮನೆಯ ಆಧಾನ ನಿಧಾನಗಳನ್ನು ತಿಳಿದುಕೊಂಡನು. ತನ್ನ ಬಣ್ಣ ಬಣ್ಣದ ಕಾಗದಗಳು ವರತ ರೇಕುಗಳೂ, ಗುನ್ನಾಂಪಟ್ಟಿ, ಕತ್ತರಿ, ಬಿದುರುಗಳನ್ನೆಲ್ಲಾ ಒಂದು ಬುಟ್ಟಿಯಲ್ಲಿಟ್ಟು ಯಜಮಾನನ ಕೊಠಡಿಯ ಒಂದು ಮೂಲೆಯಲ್ಲಿಟ್ಟು ಹಿಂತಿರುಗಿ ಬರುತ್ತಿದ್ದನು. ಹೀಗೆಯೇ ಎರಡು ಮೂರು ದಿನಗಳಾದವು. ಮದುವೆಯೂ ಹತ್ತಿರ ಬಂತು.

ಮನೆಯ ಯಜಮಾನನಿಗೆ ಕಿರಿಯ ಮಗಳ ಮದುವೆ. ಮೋಹದ ಮಗಳ ಮದುವೆ. ದೊಡ್ಡ ಕಡೆಯ ಗಂಡು. ಅಂತಾಗಿ ಒಡವೆಗಳ ಮೇಲೆ ಹಣ ಹಾಕಿದರೆ ಹಣವೂ ದಂಡವಾಗುವುದಿಲ್ಲ. ಕೇಳಿದವರಿಗೆ ಅಷ್ಟು ಸಾವಿರ ರೂಪಾಯಿ ಖರ್ಚು ಮಾಡಿದೆ ಎಂದು ಹೇಳುವುದಕ್ಕೂ ಅನುಕೂಲ ಎಂದು ಬಿಡುಕೈಯಿಂದ ಒಡವೆಗಳ ಮೇಲೆ ಹಣ ಸುರಿಯುತ್ತಿದ್ದನು.

ಈ ಒಡವೆಗಳಲ್ಲೆಲ್ಲಾ ಹಿರಿದಾದುದೆಂದರೆ ಒಂದು ಜತೆ ವಜ್ರದ ಓಲೆ. ಹಿಂದು ಮುಂದು ಯೋಚಿಸಿ, ಮೇಷ ವೃಷಭ ಲೆಕ್ಕ ಹಾಕಿ ನಾಲ್ಕು ಸಾವಿರ ರೂಪಾಯಿನ ಒಂದು ಜತೆ ಅಚ್ಚುಕಟ್ಟಾದ ಓಲೆಯನ್ನು ತೆಗೆಯಬೇಕೆಂದು ನಿರ್ಧಾರ ಮಾಡಿದನು. ಹೀಗೆ ನಿರ್ಧಾರ ಮಾಡಿ ಮನೆಯವರ ಹತ್ತಿರ ಮಾತನಾಡುತ್ತಿದ್ದುದು ಜಗ್ಗೋಜಿಗೆ ಕೇಳಿಸದೆ ಇರಲಿಲ್ಲ.

* * * *

ಆ ಮಧ್ಯಾಹ್ನ ತನ್ನ ಕೆಲಸವು ಮುಗಿದ ಮೇಲೆ ಜಗ್ಗೋಜಿಯು ತನ್ನ ಸಾಮಾನಬುಟ್ಟಿಯನ್ನು ರಾಯರ ಕೊಠಡಿಯಲ್ಲಿಟ್ಟು ತನ್ನ ಕೈಬುಟ್ಟಿಯನ್ನು ಮಾತ್ರ ತೆಗೆದುಕೊಂಡು ಹಿಂತಿರುಗುತ್ತಿದ್ದಾಗ ಮನೆಯ ಜವಾನ ಬೋರನು ಸಿಕ್ಕಿದನು. ಬೋರನಹತ್ತಿರ ಎಲೆಅಡಿಕೆ ಕೇಳುತ್ತಾ ಯಾವುಯಾವುದೊ ಮಾತನಾಡುತ್ತಿದ್ದನು. ಮಾತಿಗೆ ಮಾತುಬಂದು ಪೂರ್ಣಯ್ಯನ ಛತ್ರದಲ್ಲಿ ಒಬ್ಬ ಹಾವಾಡಿಗನು ಬಂದಿರುವನೆಂದೂ ಅವನ ಕೈಯಲ್ಲಿ ಒಂದು ದೊಡ್ಡ ಗರುಡ ಮಚ್ಚೆಯಿರುವುದೆಂದೂ, ಅವನು ಎಂತಹ ಹಾವನ್ನಾದರೂ ಹಿಡಿಯುವವನೆಂದು ರಾಜಾಧಿರಾಜರೆಲ್ಲರೂ ಅವನಿಗೆ ಅಭಿನಂದನಾಪತ್ರಗಳನ್ನು ಕೊಟ್ಟಿದ್ದರೆಂದೂ ಹೇಳಿದನು. ಅದಲ್ಲದೆ ಇನ್ನೂ ಯಾವು ಯಾವುದೋ ಮಾತುಗಳನ್ನಾಡಿ ನಂತರ ಅವನನ್ನು ಬೀಳ್ಕೊಟ್ಟು ತನ್ನ ಹಜಾರಕ್ಕೆ ಹೋದನು.

ಮಾರನೆಯ ದಿನ ಜಗ್ಲೋಜಿಯು ಯಥಾಪ್ರಕಾರ ರಾಯರ ಮನೆಯಲ್ಲಿ ಹಾಜರು. ತನ್ನ ಕೆಲಸವೆಲ್ಲಾ ಮುಗಿದನಂತರ ತನ್ನ ಕೈಬುಟ್ಟಿಯಿಂದ ಏನನ್ನೋ ತೆಗೆದು ಸಾಮಾನಬುಟ್ಟಿಯಲ್ಲಿಟ್ಟು ಸರಿಯಾಗಿ ಮುಚ್ಚಳ ಮುಚ್ಚದೆ ಆ ಬುಟ್ಟಿಯನ್ನು ರಾಯರ ಕೊಠಡಿಯಲ್ಲಿಟ್ಟು ಬಂದನು. ಆ ದಿನ ಓಲೆಯನ್ನು ಕೊಂಡುಕೊಂಡು ಬರಲೋಸುಗ ಹೋದ ರಾಯರು ಸ್ವಲ್ಪ ವೇಳೆಯಾಗಿಯೇ ಮನೆಗೆ ಹಿಂತಿರುಗಿದರು. ಬಂದವರೇ ಓಲೆಯನ್ನು ಮನೆಯವರಿಗೆ ತೋರಿಸಿ ತಮ್ಮ ರೂಮಿನೊಳಗೆ ತೆಗೆದು ಕೊಂಡು ಹೋಗಿ ಬೀರುವನಲ್ಲಿ ಸುರಕ್ಷಿತವಾಗಿ ಇರಿಸಿ, ಊಟಕ್ಕೆಂದು ಅಡುಗೆಯ ಮನೆಗೆ ಹೋದರು. ವಿಶ್ರಾಂತಿಗಾಗಿ ಕೊಠಡಿಗೆ ಬರುತ್ತಾರೆ! ಕೊಠಡಿಯಲ್ಲಿ ಬುಸ್ ಎಂದು ಶಬ್ದ. ಬಾಗಿಲಲ್ಲೇ ನಿಂತು ನೋಡುತ್ತಾರೆ ತಮ್ಮ ಹಾಸಿಗೆಯ ಹತ್ತಿರವೇ ಒಂದು ಘಟಸರ್ಪ. ಅಯ್ಯೋ ಎಂದು ಕೂಗಿ ತಕ್ಷಣ ಬಾಗಿಲೆಳೆದುಕೊಂಡು ಕೂಗ ಲಾರಂಭಿಸಿದರು. ಮನೆಯವರೆಲ್ಲಾ ಬಂದರು. ಬೋರನನ್ನು ಕರೆದರು. ಏನು ಮಾಡುವುದೆಂದು ಯೋಚಿಸಿದರು. ಬೋರನನ್ನು ಹಾವು ಕೊಲ್ಲುತ್ತೀಯಾ ಎಂದರು. ನಾಗರ ಹಾವು ಒಲ್ಲೆ ಎಂದ ಬೋರ. ಆಗ ಹಿಂದಿನ ದಿನದ ಮಾತು ಜ್ಞಾಪಕ ಬಂತು. ಕೂಡಲೇ ಹೇಳಿದ ಪೂರ್ಣಯ್ಯನ ಛತ್ರದಲ್ಲಿ ಹಾವಾಡಿಗನಿರುವನೆಂದು ಅವನು ಹಾವು ಹಿಡಿಯುವನೆಂದು ನಾನು ಓಡಿ ಹೋಗಿ ಕರೆದುತರುವೆನೆಂದು ಹೇಳಿದ್ದೆ ತಡ ಓಡಿಹೋಗಿ ಛತ್ರದ ಬಾಗಿಲಲ್ಲೇ ಇದ್ದ ಹಾವಾಡಿಗನನ್ನು ಕರೆದುಕೊಂಡು ಬಂದನು. ಹಾವಾಡಿಗನೋ ಎಲ್ಲ ಹಾವಾಡಿಗರಂತೆಯೇ, ಆದರೆ ಎಡಗೈಯ ಮೇಲೆ ಎಲ್ಲರಿಗೂ ಕಾಣುವಂತೆ ಒಂದು ದೊಡ್ಡ ಗರುಡಮಚ್ಚೆ ಬಂದವನು ಹಾವೆಲ್ಲಿ ಎಂದ. ಬಾಗಿಲು ಹಾಕಿದ ಕೊಠಡಿಯನ್ನು ತೋರಿಸಿದರು. ಯಾವುದಾದರೂ ಒಂದು ಬುಟ್ಟಿಯನ್ನು ಕೊಡಿ ಎಂದ. ಮನೆಯಲ್ಲಿದ್ದ ಬುಟ್ಟಿಯೊಂದನ್ನು ಕೊಟ್ಟರು. ಗರುಡಮಚ್ಚೆ, ಬುಟ್ಟಿ ಈ ಶಸ್ತ್ರಾಯುಧನಾಗಿ ಕೊಠಡಿಯನ್ನು ಹೊಕ್ಕು ಬಾಗಿಲು ಹಾಕಿಕೊಂಡನು ಒಳಗಿನಿಂದ ಶೀಟಿ ಹಾಕಿದ ಶಬ್ದ. ನಾಗಸ್ವರ ಶೀಟಿಯಿಂದ ಹಾಡಿದ ಶಬ್ದ. ಪೆಟ್ಟಿಗೆ ನೂಕಿದ ಶಬ್ದ. ಬಾಗಿಲು ತಟ್ಟಿದ ಶಬ್ದ ಏನೇನೋ ಶಬ್ದ. ಕೊನೆಗೂ ಕಾಲು ತಾಸಾದ ಮೇಲೆ ಹಾವನ್ನು ಕೈಲಿ ಹಿಡಿದುಕೊಂಡು ಹೊರಕ್ಕೆ ಬಂದ. ಎಲ್ಲರಿಗೂ ಕಾಣು ವಂತೆ ಆ ಗೋಧಿ ನಾಗರವನ್ನು ಬುಟ್ಟಿಯೊಳಕ್ಕೆ ಸೇರಿಸಿದ ಆ ಹಾವಿಗೆ ಬಹಳ ಛಟವಿ ದೆಯೆಂದೂ ಅದಕ್ಕಾಗಿ ಅದನ್ನು ದೂರ ಹೋಗಿ ಕಾಡಿನಲ್ಲಿ ಬಿಟ್ಟು ಬರುವೆನೆಂದೂ, ಇನಾಮು ತೆಗೆದುಕೊಂಡು ಹಾವಾಡಿಗನು ಹೊರಟುಹೋದ.

ಈ ಸಂಘಟನೆಯಾದ ಮೇಲೆ ರಾಯರು. ಅವರ ಹೆಂಡತಿ, ಬೋರ ಎಲ್ಲರೂ ಒಟ್ಟಿಗೇ ಕೊಠಡಿಗೆ ಹೋದರು. ಹೆದರಿಕೊಂಡೇ ಹೊದರು ಇನ್ನು ಎಲ್ಲಿ ಯಾವ ಹಾವು ಇರುತ್ತದೆಯೋ ಎಂದು. ಒಳಗೆ ಹೋದ ಮೇಲೆ ಅಲ್ಲಿ ಇಲ್ಲಿ ಬಿದ್ದಿದ್ದ. ಸಾಮಾನುಗಳನ್ನೆಲ್ಲಾ ಸರಿಯಾಗಿ ಇಟ್ಟರು. ಆಗ ಯಜಮಾನತಿಯುಬಂದಳು 'ಇದೇನು ಅಂದ್ರೆ ಬೀರು ಬಾಗಿಲು ತೆಗೆದಿದೆ' ಎಂದು ಅಯ್ಯೋ ಎಂದು ರಾಯರು ಬೀರುವಿನ ಹತ್ತಿರ ಹೋದರು ಒಳಗೆ ನೋಡಿದರೆ ಎಲ್ಲವೂ ಸರಿಯಾಗಿದೆ. ಓಲೆಯು

ಪೆಟ್ಟಿಗೆ ಮಾತ್ರ ಇಲ್ಲ. ಜೋರ ಎಲ್ಲೋ ಆ ಹಾವಾಡಿಗ, ಓಲೆಕದ್ದ ಎಂದು ಕೂಗಾಡಲಾರಂಭಿಸಿದರು. ಜೋರ ಹೇಳಿದ ಅವನು ಛತ್ರದಲ್ಲೇ ಇರುತ್ತಾನೆ. ಪೋಲೀಸಿನವನೊಡನೆ ಹೋದರೆ ಸಿಕ್ಕೇ ಸಿಗುತ್ತಾನೆ ಎಂದು. ಸರಿ ರಾಯರು ಜೋರ ಪೋಲೀಸಿನವನನ್ನು ಕರೆದುಕೊಂಡು ಛತ್ರಕ್ಕೆ ಓಡಿದರು. ಅಲ್ಲಿ ಹಾವಾಡಿಗನೂ ಇಲ್ಲ. ಹಾವೂ ಇಲ್ಲ. ಅಲ್ಲಿಗೆ ಹಾವಾಡಿಗನು ಬಂದಿದ್ದುದೇ ಯಾರಿಗೂ ತಿಳಿಯದು. ಆ ವೇಳೆಗೆ ಜಗ್ಗೋಜಿ ಬಿಕ್ಷುಕರ ಹಜಾರದಲ್ಲಿ ತನ್ನ ಎಡಗೈ ಮೇಲಿನ ಗರುಡ ಮಚ್ಚೆಯನ್ನು ಸೀಗೆಕಾಯಿನಿಂದ ತೊಳೆದುಕೊಳ್ಳುತ್ತಿದ್ದ. ಮುದಿಯಾದ ಹಲ್ಲಿಲ್ಲದ ಸಾಕು ಹಾವಿಗೆ ಹಾಲುಣಿಸುತ್ತಿದ್ದ. ಓಲೆಯ ಪೆಟ್ಟಿಗೆಯನ್ನು ತನ್ನ ಕಾಗದದ ಸಾಮಾನುಗಳೊಡನೆ ಸುರಕ್ಷಿತವಾಗಿ ಇರಿಸಿದ್ದ.

ಮೂರನೆಯ ದಿನ ರಾಯರ ಮನೆಯಲ್ಲಿ ಜಗ್ಗೋಜಿ ಎಂದಿನಂತೆ ಹಾಜರು—ಮಂಟಪ ಕಟ್ಟುವ ವೇಷದಲ್ಲಿ—ಜೋರ ಮೊದಲಾಗಿ ಎಲ್ಲರೂ ಅವನಿಗೆ ಈ ಸಂಘಟನೆಯನ್ನು ಹೇಳಿದರು. ಅಯ್ಯೋ ಸ್ವಾಮಿ ನಿನ್ನೆ ತಾನೆ ನೋಡಿದೆ. ಆ ಮಚ್ಚೆ ಇರುವ ಮನುಷ್ಯನನ್ನು ಅವನಿಗೆ ನಾನೇ ತಂಬಾಕು ಕೊಟ್ಟೆ. ಈ ಊರಲ್ಲೆಲ್ಲಿದ್ದರೂ ಹಿಡಿದು ತರುತ್ತೇನೆ. ನನಗೆ ಮಾತ್ರ ಐದು ರೂಪಾಯಿ ಬಹುಮಾನ ಕೊಡಬೇಕು. ಎಂದು ಹೇಳಿ ತನ್ನ ಮಂಟಪದ ಕೆಲಸವನ್ನು ಮುಗಿಸಿ, ತನ್ನ ಸಾಮಾನು ಬುಟ್ಟಿಯನ್ನು ತೆಗೆದುಕೊಂಡು ರಾಯರನ್ನು ಬೀಳ್ಕೊಟ್ಟು, ಹಿಂತಿರುಗಿದ. ಭಿಕ್ಷುಕರ ಹಜಾರಕ್ಕೆ ಬಂದವನೇ ತನ್ನ ಹಳ್ಳಿಗೆ ಹೊರಡಲು ಏರ್ಪಾಡು ಮಾಡಿಕೊಂಡು ಹೊರಟೇ ಹೋದ.

ಆ ದಿನ ಸಾಯಂಕಾಲ ರಾಯರು ಸುಸಜ್ಜಿತವಾದ ವಿವಾಹದ ಕಾಗದಮಂಟಪ ನೋಡುತ್ತಾರೆ. ಅದರ ಪೀಠದ ಮೇಲೆ ಜಗ್ಗೋಜಿ ಎಂದು ಸಹಿ ಇತ್ತು.

ರಾ. ಶಿ.

ಸಂಪಾದಕರ ಆರಾಮ ನಿಮಿಷಗಳು

'ಹುಚ್ಚುನಾಯಿನ ಬಾಲಕ್ಕೆ ಡಬ್ಬ ಕಟ್ಟಿದ ಪ್ರಸಂಗ'
"ರಾಷ್ಟ್ರಜೀವನ ಸಂಪಾದಕರಿಂದ"

ಪತ್ರಿಕೆಯ ಶಿರೋನಾಮ.

*　　*　　*　　*

"ನಿಮ್ಮ ಸಿದ್ಧೌಷದಿಯನ್ನು ತೆಗೆದುಕೊಳ್ಳುವ ಮೊದಲು ರಾತ್ರಿ ನಿದ್ರೆಯೇ ಬರುತ್ತಿರಲಿಲ್ಲ. ಈಗ ಮನೆಯಮೇಲೆ ಬಾಂಬು ಬಿದ್ದರೂ ಎಚ್ಚರವಾಗುವುದಿಲ್ಲ."

ದಿನ ಪತ್ರಿಕೆಯಲ್ಲಿ ಜಾಹೀರಾತು ಕಾಗದ.

ಈ ಲೋಕದಲ್ಲಿ ಎಚ್ಚರವಾಗದೇ ಇರಬಹುದು.

*　　*　　*　　*

"ವೈದ್ಯನ ಸರ್ಟಿಫಿಕೇಟ್"

★

ಕೆಲವು ದಿನಗಳ ಹಿಂದೆ ಒಂದು ಖಾಲಿ ಕೆಲಸಕ್ಕೆ ಅರ್ಜಿ ಗುಜರಾಯಿಸಿದೆ. ಮೊದ ಮೊದಲು ಅರ್ಜಿಗಳನ್ನು ಬರೆದು ಅಧಿಕಾರಿಗಳಿಗೆ ಕಳುಹಿಸುತ್ತಿದ್ದೆ. ಈಗೀಗ ವೃತ್ತಪತ್ರಿಕೆಗಳ ಕನ್ನಡವನ್ನು ಕಲಿತಮೇಲೆ ಅರ್ಜಿ ಬರೆಯುವುದು ಅಭ್ಯಾಸವಾಗಿ ನೀರು ಕುಡಿದಂತಾದ ಮೇಲೆ ಅರ್ಜಿಗಳನ್ನು ವಾಕ್ಯಶಃ ಗುಜರಾಯಿಸಲು ಆರಂಭಮಾಡಿದ್ದೆ. ಮೊನ್ನೆ ಮೊನ್ನೆ ಗುಜರಾಯಿಸಿದ ಅರ್ಜಿಗೆ ಏನುತ್ತರ ಬಂತು ಗೊತ್ತೆ! ಈ ಕೆಲಸಕ್ಕೆ ನಿಮ್ಮನ್ನು ಚುನಾಯಿಸಿದ್ದೇವೆ ನೀವು ವೈದ್ಯರೊಬ್ಬರಿಂದ ಆರೋಗ್ಯವಾಗಿದ್ದೀರೆಂದು ಸರ್ಟಿಫಿಕೇಟ್ ಸಹಿತ ಸೋಮವಾರ ಕೆಲಸಕ್ಕೆ ಬರಬೇಕು ಎಂದು ಕಾಗದ ಬಂದಿತ್ತು.

ನನಗೆ ತಿಳಿದ ವೈದ್ಯರೆಂದರೆ ನಮ್ಮ ಪೇಟೆಯಲ್ಲಿ ಅಂಗಡಿ ಇಟ್ಟಿರುವ ಶ್ರೀನಿವಾಸ ಅಯ್ಯಂಗಾರ್ಯರು. ಅವರೂ ನಾನೂ ದಿನಾಲೂ ಇಡಿಲಿ ಚಟ್ಟಣಿ ಪುಡಿ ಎಣ್ಣೆಗಾಗಿ ಐಯ್ಯಂಗಾರ್ಯರ ಹೋಟಲಿನಲ್ಲಿ ಕೂಡುತ್ತಿದ್ದೆವು ಈ ತಿಂಡಿಯೂ ಇನ್ನೆಲ್ಲೂ ಸಿಗದು. ಇದು ಬಿಟ್ಟರೆ ಇನ್ನಾವ ತಿಂಡಿಯೂ ನಮ್ಮಿಬ್ಬರಿಗೂ ರುಚಿಸದು. ಹಾಗಾಗಿ ಈ ಹೋಟಲು ಬೆಳಗಾಗುತ್ತಲೂ ನಮ್ಮ ಮನೆಯಂತಾಗಿತ್ತು. ಮೊದಲು ಇಡಲಿ ತಿನ್ನುವಾಗ ಮೈಸೂರು ರಾಜಕೀಯ, ಎರಡನೆಯ ಇಡಲಿಯ ವೇಳೆಗೆ ಹಿಂದೂಸ್ಥಾನ ಪಾಕಿಸ್ಥಾನ ಪಾರ್ಶಿಸ್ಥಾನ ಬ್ರಾಹ್ಮಣ ಸ್ಥಾನಮಾನ, ಇವುಗಳನ್ನು ಮಾತಾಡಿ ಮುಗಿಸುತ್ತಿದ್ದೆವು ಕೆಲವು ವೇಳೆ ಮಾತಿನ ಜೋರಿನಲ್ಲಿ ಮೂರನೆ ಇಡಲಿ ತರಿಸಿದರೆ ಲೋಕವಾರ್ತೆ, ಯೂರೋಪು ಸಂಗ್ರಾಮ, ಜಪಾನಿ ಚೀನಾ ಕಲಹ ಇತ್ಯಾದಿಗಳನ್ನೆಲ್ಲಾ ಮುಗಿಸುತ್ತಿದ್ದೆವು. ಈ ಭಾಂಧವ್ಯವನ್ನು ಬೆಳೆಸಿಕೊಂಡಿದ್ದ ನನಗೆ ಇಡಲಿ ಚಟ್ಟಣಿಪುಡಿ ಜತೆಗೆ ವೈದ್ಯರಿಲ್ಲದಿದ್ದರೆ ತಿಂಡಿಯೇ ರುಚಿಸುತ್ತಿರಲಿಲ್ಲ. ವೈದರಿಗೂ ಪರಸ್ಪರವಾಗಿ ಹಾಗೆಯೇ. ಇಷ್ಟು ಅನ್ಯೋನ್ಯವಾದ ವೈದ್ಯನಿಂದ ಸರ್ಟಿಫಿಕೇಟ್ ತೆಗೆದುಕೊಳ್ಳುವುದು ಏನು ಕಷ್ಟ. ಆತನ ಹತ್ತಿರ ಹೋಗಿ ಒಂದು ಸರ್ಟಿಫಿಕೇಟನ್ನು ಬರೆಸಿಕೊಂಡು ಬಂದೆ ಶನಿವಾರ ಬೆಳಿಗ್ಗೆ—


ಶನಿವಾರ ಮಧ್ಯಾಹ್ನ ನನ್ನ ತಂಗಿಗೆ ಕೆಂಡಾಮಂಡಲ ಜ್ವರ. ನಮ್ಮ ತಾಯಿಯು ದಡಾರ ಏಳುತ್ತೆ ಅಂತ ಕಾಣುತ್ತೆ ಸೀನುತ್ತಾ ಕಣ್ಣೆಲ್ಲಾ ಕೆಂಪಗೆ ಮಾಡಿಕೊಂಡಿದಾಳೆ. ಒಂದಿಷ್ಟು ಬೇವಿನ ಸೊಪ್ಪು ಬಾಗಲಿಗೆ ಕಟ್ಟಿದ್ದರೆ ಸಾಕು. ಎಂದಳು ತಮ್ಮ ತಂದೆಯು ಏನೇ ಆಗಲಿ ಬಾಗಲಿಗೆ ಬೇವಿನ ಸೊಪ್ಪಿನ ಜತೆಗೆ

ಮಗಳಿಗೆ ಮದ್ದನ್ನು ಕುಡಿಸೋಣ ಎಂದು ನನ್ನನ್ನು ಕರೆದು ಔಷಧಿ ತರಲು ಕಳುಹಿಸಿದರು. ನಾನು ಮರಳಿ ವೈದ್ಯನ ಹತ್ತಿರ ಹೋಗುವಾಗ್ಯೆ ಆತನು ಮಾರ್ಕೆಟ್ ಬಳಿಯಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದನು. ಅಲ್ಲಿಯೇ ಈ ವಿಚಾರ ಹೇಳಿ ಒಂದು ಔಷಧದ ಚೀಟಿಯನ್ನು ಬರೆಸಿಕೊಂಡೆನು. ಆ ಚೀಟಿಯನ್ನು ಜೇಬಿನಲ್ಲಿಟ್ಟುಕೊಂಡು ಆಸ್ಪತ್ರೆಗೆ ಹೋದೆ. ಅಲ್ಲಿದ್ದ ಕಾಂಪೌಂಡರ ಕೈಲಿ ಜೇಬಿನಿಂದ ಚೀಟಿ ತೆಗೆದುಕೊಟ್ಟು ಒಂದು ಶೀಶಾಯಿಯನ್ನು ಕೊಟ್ಟೆ. ಆತನೂ ಮೂರು ವೇಳೆ ಕೆಂಪು ಔಷಧಿಯನ್ನು ಶೀಶೆ ತುಂಬ ನನ್ನ ಕೈಲಿ ಕೊಟ್ಟನು.

ಮನೆಗೆ ಒಂದು ಔಷಧಿ ಕೊಟ್ಟೆ. ಮಧ್ಯಾಹ್ನ ನನ್ನ ಆರೋಗ್ಯದ ಸರ್ಟಿಫಿಕೇಟನ್ನು ಜೇಬಿನಿಂದ ತೆಗೆದರೆ ಅದಿಲ್ಲವೇ ಇಲ್ಲ. ಅದರ ಬದಲು ಈ ಔಷಧಿಯ ಚೀಟಿ ಇತ್ತು ಅರೆ; ಇದು ಹೇಗೆ ಸಾಧ್ಯ. ನನ್ನ ಸರ್ಟಿಫಿಕೇಟ್ ನೋಡಿ ಕಾಂಪೌಂಡರು ಏನು ಔಷಧಿ ಕೊಟ್ಟ. ಇರಲಿ ಈ ಚೀಟಿಯಲ್ಲಿ ಏನಿದೆ ಓದೋಣ ಎಂದು ಓದಲೆತ್ನಿಸಿದೆ. ಅದು ಯಾವ ಭಾಷೆಯಲ್ಲಿ ಬರೆದಿದೆಯೆಂಬುದನ್ನು ಸಿದ್ಧಾಂತ ಮಾಡುವುದೇ ಪ್ರಯಾಸ. ಇಂಗ್ಲೀಷಿನಂತೆ ಕಾಣಲಿಲ್ಲ. ಆತ ತಮಿಳಿನವನು ಆ ಭಾಷೆಯ ಹಾಗೂ ತೋರಲಿಲ್ಲ. ಮಸಲವೋಡಿ ಕನ್ನಡವೋ ಎಂದು ನೋಡಿದೆ ಅದರಂತೆಯೂ ಕಂಡು ಬರಲಿಲ್ಲ. ಓರೆ ಕೋರೆಗಳನ್ನು ನೋಡಿ ಕಡೆಗೆ ಇಂಗ್ಲೀಷೇ ಇರಬೇಕು. ಎಂದು ಸಿದ್ಧಾಂತ ಮಾಡಿದೆ ಅಯ್ಯೋ ತಿರುಗಿ ಹೋಗಿ ಸರ್ಟಿಫಿಕೆಟ್ ಬರೆಸಬೇಕಲ್ಲ ಎಂದು ಯೋಚಿಸಿದೆ.

ಮರುಕ್ಷಣವೇ ಇನ್ನೊಂದು ಯೋಚನೆಹೊಳೆಯಿತು. 'ಕಾಂಪೌಡರೇ ಈ ತಪ್ಪು ಮಾಡಿದರೆ ನನ್ನ ಅಧಿಕಾರಿಗಳೂ ಇದೇ ತಪ್ಪು ಏಕೆ ಮಾಡಬಾರದು ಎಂದು. ಸರಿ. ಈ ಔಷಧಿ ಚೀಟಿಯನ್ನು ತೆಗೆದುಕೊಂಡು ಹೋಗಿ ಸೋಮವಾರ ಕೆಲಸಕ್ಕೆ ಹಾಜರಾದೆ ಈ ಚೀಟಿಯನ್ನು ಅಧಿಕಾರಿಗಳಿಗೆ ಕೊಟ್ಟೆ ಅವರು ಇದನ್ನು ಸಾವಧಾನವಾಗಿ ಓದಿದವರಂತೆ ನಟಿಸಿ ಏನೆಂದರು ಗೊತ್ತೆ. ಈ ಸರ್ಟಿಫಿಕೇಟ್ ಸರಿಯಾಗಿಲ್ಲಯ್ಯ ಸರ್ಕಾರಿ ವೈದ್ಯರ ಹತ್ತಿರ ಇದನ್ನು ಬರೆಸಿಕೊಂಡು ಬಾ ಎಂದರು.

ಸರ್ಕಾರಿ ವೈದ್ಯರ ಹತ್ತಿರ ಹೋದಾಗ ಗೊತ್ತಾಯಿತು. ನಮ್ಮ ಅಧಿಕಾರಿಗಳು ಹಾಗೆ ಹೇಕೆ ಹೇಳಿದರೆಂದು. ಸರ್ಕಾರಿ ವೈದ್ಯರು ತಮ್ಮ ನೌಕರರ ಕೈಲಿ 'ಟೈಪು' ಮಾಡಿಸಿ ತಾವು ಸಹಿ ಹಾಕುತ್ತಾರೆ.



ಅಚ್ಚಪ್ಪನ ಚೈನಾ

ಚೈನಾ ಇಂಡಿಯಾ ಬಾಂಧವ್ಯವು ಮತ್ತೊಮ್ಮೆ ಹುಟ್ಟುತ್ತಿರುವ ಇತ್ತೀಚಿನಲ್ಲಿ ನನಗೂ ಒಂದುಹುಮ್ಮಸ್ಸು ಹುಟ್ಟಿತು. ಅಂತರ್ರಾಷ್ಟ್ರೀಯ ಸೌಹಾರ್ದವನ್ನು ಬೆಳೆಸುವ ಮಹೋದ್ಯಮದಲ್ಲಿ ಕಾಲವಿಳಂಬ ಮಾಡಲಾಗದೆಂದು ನಿರ್ಧರಿಸಿದೆ. "ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್' ಎಂಬ ಮಹಾವಾಕ್ಯದಂತೆ ತಕ್ಷಣವೇ ಅಚ್ಚಪ್ಪನನ್ನು ಕರೆದು ತೊಡೆಯ ಮೇಲೆ ಕೂರಿಸಿಕೊಂಡೆ. ಅಚ್ಚಪ್ಪ, ನನ್ನ ಅಷ್ಟಮ ಕುಮಾರ. ಮಿಡ್ಲ್‌ಸ್ಕೂಲ್ ಮೊದಲನೆಯ ತರಗತಿ ! ಭೂವಿವರಣೆ ಎಂದರೆ ಅವನಿಗೆ ಕಂಠದಲ್ಲೇ ಪಾಠ ! ಅವನನ್ನು ಕೇಳಿದೆ. "ಅಚ್ಚಪ್ಪ ಚೈನಾದ ಚಮತ್ಕಾರಗಳನ್ನು ಕೊಂಚ ವಿವರಿಸು, ನಿನಗೆ ತಿಳಿದ ಮಟ್ಟಿಗೆ'' ಅಂದೆ.

ಸ್ವಾಮೀ ! ಆ ಹುಡುಗ ಹೇಳಿದ ವಿಷಯಗಳನ್ನು ಕೇಳುತ್ತಾ ಕೇಳುತ್ತಾ ನನ್ನ ಕಿವಿಗಳೆರಡೂ ಅಗಲವಾದುವು. ಸಲಸಲಕ್ಕೂ ರೋಮಾಂಚವಾಗಿ, ಕಡೆಗೆ ಅವಕ್ಕೂ ಸುಸ್ತಾಗಿ ಅವು ಮೈಮೇಲೆಯೇ ಮಲಗಿಕೊಂಡವು. ಹತ್ತಾರು ಸಲ ಬಾಯಿ ಬಿಡಬೇಕಾಗಿ ಬಂದಿದ್ದರಿಂದ ದವಡೆಗೆ ನೋವು ಹತ್ತಿತು. "ಎಲ್ಲಿಂದ ಕಲಿತೆಯೋ ಈ ವಿಷಯಗಳನ್ನೆಲ್ಲಾ ಅಂದರೆ ''ಮಾಧ್ಯಮಿಕ ಬಾಲಕ ಬಾಲಕಿಯರಿಗಾಗಿಯೇ ಯಾರೋ ಮಹಾನುಭಾವರಿಬ್ಬರು ಬರೆದಿರುವ ಪುಸ್ತಕದಿಂದ" ಅಂತ ಅಚ್ಚಪ್ಪ ಉತ್ತರ ಕೊಡುತ್ತಲೂ ಹೋಗಿ ಆ ಗ್ರಂಥಕರ್ತರನ್ನು ಮನೆಗೆ ಕರೆತಂದು ಚೆನ್ನಾಗಿ 'ಉಪಚರಿಸಿ ಅಚ್ಚಪ್ಪನ ಅತಿಬುದ್ಧಿಯನ್ನು ಅವರಿಗೆ ತೋರಿಸಬೇಕು ಎಂದೆನಿಸಿತು. ಅವರ ಗ್ರಂಥ ಪಠನದಿಂದ ಅಚ್ಚಪ್ಪ ತಿಳಿದು ನನಗೆ ಹೇಳಿದ ಸ್ವಾರಸ್ಯವಾದ ವಿಷಯಗಳು ಇವು:

"ಚೈನಾ ದೇಶೀಯರು ಕಲ್ಲು ಸೂಜಿಗಳನ್ನು ಮಾಡುತ್ತಿದ್ದರು! ಮುದ್ರೆ ಹಾಕುವುದನ್ನು ಅವರೇ ಮೊದಲು ಪ್ರಾರಂಭಿಸಿದ್ದು! ನಮ್ಮಲ್ಲಿ 'ಮುದ್ದು ಹಾಕುವುದು' ಎಂದು ಹೇಳುವ ಪದ್ಧತಿಯನ್ನು ಚೈನಾದವರೇ ಮೊಟ್ಟಮೊದಲು ಜಗತ್ತಿಗೆ ತಂದರು! ಮುದ್ದನ್ನು ಕಂಡುಹಿಡಿದವರೇ ಅವರು ?

"ಅಲ್ಲಿಯ ಪರ್ವತಗಳು ಗೋಡೆಗಳಂತೆಯೇ ಇವೆ? ಅವುಗಳಿಗೆ ಚೀಣೀಯರು ಆಗಾಗ ಸುಣ್ಣ ಬಳಿಯುತ್ತಾರೆ! ಅವುಗಳ ಮೇಲೆ ಚೀಟಿಗಳನ್ನು ಅಂಟಿಸುತ್ತಾರೆ! ದೇವರು ಕೊಟ್ಟ ಆ ಗೋಡೆಗಳು ಸಾಲದೆಂದು ಅಸಮಾಧಾನಗೊಂಡು ಅವರು ತಮ್ಮ ದೇಶದ ಉತ್ತರಭಾಗದಲ್ಲಿ ಉದ್ದವಾದ ಗೋಡೆಯನ್ನು ಕಟ್ಟಿಸಿದ್ದಾರೆ.

"ಅಲ್ಲಿ ಗೋಧಿ, ಜೋಳ ಮುಂತಾದು ವೆಲ್ಲ ತಾವಾಗಿಯೇ ಬೆಳೆಯುವುವು! ಕೃಷಿ ಮಾಡಬೇಕಾಗಿಲ್ಲ—ಬ್ರಹ್ಮಪುತ್ರಾ ನದಿಯ ಸಮೀಪದಲ್ಲಿ ತರಕಾರಿ ಬೆಳೆಯುತ್ತದೆ. ಪಿಚಲಿಖಾರಿಗೆ ಬೀಳುವ ದುಃಖಕಾರಿ ನದಿಯ ಸಮೀಪದಲ್ಲಿ ತರಕಾರಿ ಬೆಳೆಯುತ್ತದೋ, ಏನೋ, ಪುಸ್ತಕದಲ್ಲಿ ಕೊಟ್ಟಿಲ್ಲ.

ಚೈನಾ ದೇಶದವರು ಚಾಪೆ, ಬುಟ್ಟಿ ಹೆಣೆಯುವುದನ್ನು ಕಲಿತಿದ್ದಾರೆ!-ಚೈನಾ ದೇಶದವರು ನದಿಗಳ ದಡದಲ್ಲಿ ನಿಂತು ನದಿಗಳನ್ನು ಬೈಯುವರು. "ದುಃಖಕಾರಿ, ಹಳದಿ ಹೊಳೆ" ಎಂದು ಕರೆಯುವರು. ಆಗ ಆ ನದಿ ರೇಗಿ ತನ್ನ ಪಾತ್ರವನ್ನು ಬದಲಾಯಿಸುವುದು! ಇದು ಚೀಣೀಯರಿಗೆ ಒಂದು ದೊಡ್ಡ ಆಟವಾಗಿ ಹೋಗಿದೆ. ಅಲ್ಲಿ ಗಾಡಿಯೂ ಕೂಡ ಮಧ್ಯೆ ಏಪ್ಯದಿಂದ ಹಳದಿ ಮಣ್ಣನ್ನು ತಂದು ತಂದು ಹೊಳೆಗೆ ಹಾಕಿ ತಮಾಷೆ ಮಾಡುತ್ತದೆ!

"ಹಂದಿ ಕೋಳಿ ಎಂಬ ಒಂದು ರೀತಿಯ ಹೊಸ ಪ್ರಾಣಿಯನ್ನು ಚೀಣೀಯರು ಸಾಕುತ್ತಾರೆ!-ಟಿಬೆಟ್‌ನಲ್ಲಿ ಸಿಗುವ ಚಮರೀ ಮೃಗವು ತುಂಬ ದಯಾಳುವಾದ ಪ್ರಾಣಿ. ನಮ್ಮ ದೇಶದಲ್ಲಿ ಹಸುಗಳು ಹಾಲು ಕೊಡುತ್ತದೆ ಅಷ್ಟೆ. ಆದರೆ ಚಮರೀ ಮೃಗಗಳು ತಮ್ಮನ್ನು ಸಾಕಿದವರಿಗೆ ಆಗಾಗ ಮಾಂಸವನ್ನೂ ಒದಗಿಸುತ್ತದೆ, ತೊಗಲನ್ನೂ ಒದಗಿಸುತ್ತದೆ!

"ಚೈನಾದಲ್ಲಿ ಸರಿಯಾದ ರಸ್ತೆಗಳೇ ಇಲ್ಲ. ಅಲ್ಲದೆ, ಗೋಮಾಳಗಳೇ ಇಲ್ಲ. ಅದಕ್ಕಾಗಿ ರಾಜ್ಯದಲ್ಲಿ ವಿಪ್ಲವ ಉಂಟಾಯಿತು. ಅಲ್ಲಿಯ ಜನರು ೧೯೧೨ರಲ್ಲಿ ಚಕ್ರವರ್ತಿಯನ್ನು ತೆಗೆದರು! ಚಕ್ರವರ್ತಿಗಳು ೧೯೩೨ರಲ್ಲಿ 'ಮಂಚೂರಿಯಾ'ವನ್ನು ತಲುಪಿದರು. ಅಷ್ಟು ಹೊತ್ತಿಗೆ ಆ ಊರಿನ ಹೆಸರು 'ಮಂಚುಕೋ' ಎಂದು ಬದಲಾಯಿಸಿ ಹೋಗಿತ್ತು. ೧೯೨೨ರಲ್ಲಿ ಟಿಬೆಟ್‌ನ ಡಲೈಲಾಮಾನೂ ಅವರೂ ಅಲ್ಲಿಂದ ಇಂಡಿಯಾಗೆ ಟೆಲಿಫೋನ್ ಹಾಕಿ ಸಮಾಚಾರವನ್ನು ತಿಳಿಸಿದರು. ಆಗ ಜಪಾನೀಯರುಅವನನ್ನು ಆ ಊರಿನ ಅಧ್ಯಕ್ಷನನ್ನಾಗಿ ನಿಯಮಿಸಿದರು.

"ಅಲ್ಲಿ ಕೆಲವು ಪಟ್ಟಣಗಳು ಹಿಂದಿನಿಂದಲೂ ಪ್ರಸಿದ್ಧ ; ಕೆಲವು ಮುಂದಿನಿಂದಲೂ ಪ್ರಸಿದ್ಧ !"

ಎಳೆಯ ಮಕ್ಕಳಿಗೆ ತಕ್ಕಂತೆ ಅವರ ಕುತೂಹಲವನ್ನು ಎಚ್ಚರಿಸುವಂತೆ, ಚೈನಾ ದೇಶದ ವಿವಿಧ ವಿಚಿತ್ರಗಳನ್ನು ಇಷ್ಟು ಚೆನ್ನಾಗಿ ಜೋಡಿಸಿರುವ ಗ್ರಂಥಕರ್ತಕರಿಗೆ ತಂದೆ ತಾಯಿಗಳೆಲ್ಲರೂ ಚಿರಋಣಿಗಳು. ನಾನೇ ಆ ಗ್ರಂಥವನ್ನು ಅಚ್ಚಪ್ಪನಿಂದ ತೆಗೆದೋದಿದೆ - 'ಬರೆದರೆ ಹಾಗೆಯೇ ಬರೆಯಬೇಕು' ಅಂಥ ಅನ್ನಿತು. ಆಸಿದರೆ ಒಂದು ವಿಷಯ ಅನ್ನಿ! ಅಚ್ಚಪ್ಪನ ಹಾಗಿನ ಬುದ್ಧಿವಂತ ಹುಡುಗರೂ ಸಿಗಬೇಕಲ್ಲ !

—ನಾ. ಕ.

ಚಿತ್ರಕಲ್ದುರ್ಗ

ಚಿತ್ರದುರ್ಗ ಎಂದರೆ ನನ್ನ ಮಾನ್ಯ ಸ್ನೇಹಿತರೊಬ್ಬರಿಗೆ ಬಹಳ ಕೋಪ. ಅದು ಚಿತ್ರಕಲ್ದುರ್ಗ ಈಗ ಚಿತ್ರದುರ್ಗ ಎಂದು ಎಲ್ಲರೂ ಕರೆಯುತ್ತಿದ್ದಾರೆ. ಬಹಳ ತಪ್ಪು ಎಂದು ಅವರ ಅಭಿಮತ. ಮದಕರಿನಾಯಕನು ದುರ್ಗವೊಂದನ್ನು ಚಿತ್ರಕಲ್ಲಿಂದ ಕಟ್ಟಿದನಾದ್ದರಿಂದ ಅದು ಚಿತ್ರದುರ್ಗವೆನ್ನಿಸಿಕೊಂಡಿದೆ ಎಂದು ಭಾವನೆ. ಇದೇನು ಚಿತ್ರಕಲ್ಲು ನೋಡಿಯೇ ಬಿಡೋಣ ಎಂದು ದುರ್ಗಾಪ್ರವಾಸಕ್ಕೆ ಹೊರಟೆ.

ದುರ್ಗವನ್ನು ಮುತ್ತಿಗೆ ಹಾಕಲು ನಾನು ಸಣ್ಣ ಸೇನೆಯೊಂದರೊಡನೆಯೇ ಹೊರಟೆ. ಒಬ್ಬೊಬ್ಬ ಸೈನಿಕನಿಗೂ ಮಹಾಭಾರತದ ಒಂದೊಂದು ಹೆಸರಿಟ್ಟಿದ್ದೆವು. ಹಾಗಾಗಿ, ಅರ್ಜುನ, ನಕುಲ, ಸಹದೇವ, ಸೈಂಧವ, ಶಕುನಿಮಾಮ, ಇತ್ಯಾದಿ ವೀರರೆಲ್ಲರೂ ನಮ್ಮ ಗುಂಪಿನಲ್ಲಿದ್ದರು. ಅಥರ್ವ ವ್ಯಾಪಾರದಲ್ಲಿ ತೊಡಗಿದ್ದ ನಾವು ಯಥಾಪ್ರಕಾರ ಕರಗಕ್ಕೆ ಸಿದ್ಧವಾಗಿ ಮುಂದೆ ಹೊರಟೆ. ಚಪ್ಪಲಿ ಹಾಕಿಕೊಂಡರೆ ಬೆಟ್ಟದ ಮೇಲೆ ಕಾಲು ಜಾರುತ್ತೆ. ಆದಕ್ಕಾಗಿ ಬರೀ ಕಾಲಿನಲ್ಲಿದ್ದರೆ ಒಳ್ಳೆಯದು ಎಂದು ಒಂದು ಮೈಲಿ ಹೋದ ಮೇಲೆ ಹೇಳಿದರು. ಹಾಗಾಗಿ ಬೆಟ್ಟ ಹತ್ತುವ ವೇಳೆಗೆ ಒಬ್ಬೊಬ್ಬನ ಕೈಲೂ ಒಂದೊಂದು ಜತೆ ಚಪ್ಪಲಿ. ಇನ್ನೊಂದು ಕೈಲಿ ಪಂಚೆಯ ತುದಿ. ಹೀಗೆ ಹೊರಟಿತು ಪ್ರಭಾತದಲ್ಲಿ ಹೊರಟ ಫೇರಿ ಬೆಟ್ಟದ ಮೇಲೇನಾದರೂ ಅಪ್ಪಿತಪ್ಪಿ ದೆವ್ವ ಪಿಶಾಚಿಗಳಿದ್ದಿದ್ದರೆ, ಹಿಂದೆ ಸತ್ತ ಸೈನಿಕರ ಜೀವಗಳು ಅಂತರ್ಪಿಶಾಚಿಗಳಾಗಿದ್ದರೆ, ಈ ಚಪ್ಪಲಿ ಸೈನ್ಯವನ್ನು ನೋಡಿಯೇ ತಿರುಗಿ ಮರ್ತ್ಯಲೋಕದಲ್ಲಿ ಹುಟ್ಟುವಂತಾಗಿದ್ದಿರಬೇಕು. ಅಂತೂ ನಾವೆಲ್ಲರೂ ಬೆಟ್ಟ ಹತ್ತುವ ವೇಳೆಗೆ ಒಂದು ದೆವ್ವದ ಪಿಳ್ಳೆಯೂ ಸಹಾ ಕಾಣಬರಲಿಲ್ಲ.

ಕಲ್ಯಾಣಿ ಹತ್ತಿರ ಹೋದೆವು. ಹಾಳುಬಿದ್ದ ಮಠಗಳನ್ನು ಕಂಡೆವು ದೇವರು ಎಲ್ಲಿ ಇಲ್ಲ? ಎಂದರೆ ಎಲ್ಲಿ! ಎಂದು ತೋರಿಸಬಹುದಾದ ದೇವಸ್ಥಾನಗಳನ್ನು ನೋಡಿದೆವು. ಒಂದು ಬಂಡೆಯ ತಳಕ್ಕೆ ಲಂಟಾನಾ ತಪ್ಪಿಸಿಕೊಂಡು ಬಂದಾಗ ದರ್ಶಕಗೆಳೆಯನು ಹೇಳಿದನು. ಈ ಇಳಿಜಾರು ಬಂಡೆಯನ್ನು ಹತ್ತಿಹೋದರೆ ಮೇಲೆ ತುಪ್ಪದ ಕೊಳ ಎಣ್ಣೆಯ ಕೊಳ ನೋಡಬಹುದು ಎಂದು. ಹುಡುಗರ ಹುಮ್ಮಸ್ಸು. ಹತ್ತಿಯೇ ಬಿಡೋಣ ಎಂದು ಎಲ್ಲರೂ ಕೈಕಾಲುಗಳ ಮೇಲೆ ಆ ಇಳಿಜಾರಾದ ಬಂಡೆಯನ್ನು ಹತ್ತಲಾರಂಭಿಸಿದೆವು. ದೂರದಿಂದ ನೋಡುತ್ತಿದ್ದ ನನಗೆ ಡಾರ್ವಿನ್ ಮಹಾಶಯನು ಇಂತಹ ಜನರನ್ನು ನೋಡಿಯೇ ತನ್ನ ಮನುಜನು ಕಪಿವಂಶೀಯನೆಂಬ ಸಿದ್ಧಾಂತಕ್ಕೆ ಬಂದಿದ್ದಿರಬಹುದೆಂದು ತೋರಿತು. ಬಂಡೆಯ ಮೇಲೆ ಹತ್ತಿ ಎಲ್ಲರೂ ಬರುವ ಹೊತ್ತಿಗೆ ಒಬ್ಬೊಬ್ಬರ ಮುಖದಲ್ಲೂ ಎಣ್ಣೆಯ ಕೊಳಕು ಇದ್ದಂತಾಗಿತ್ತು. ಇದೆಯೋ ಎಣ್ಣೆಯ ಕೊಳ ಎಂದು ಕೇಳುವುದಕ್ಕೆ ಮುಂಚೆಯೇ ನಮ್ಮ

ದರ್ಶಕನು ಇನ್ನು ಮುಂದೆ ತುಪ್ಪದ ಕೊಳ ಎಂದು ಕರೆದುಕೊಂಡು ಹೋಗಿ ತೋರಿಸಿದನು.

ತುಪ್ಪದ ಕೊಳದ ಹತ್ತಿರ ಗರುಡಗಂಬ ಒಂದಿತ್ತು. ತುಪ್ಪದ ಕೊಳ ನೋಡಿ ನಂತರ ಕಂಬದ ಕಡೆಗೆ ತಿರುಗಿದರೆ ಅದರ ಮೇಲೆ ನಮ್ಮ ಸೈನಿಕನೊಬ್ಬನು ಆರೋಹಣ ಮಾಡಿ ಇದು ನಮ್ಮ ಪ್ರದೇಶ ಎಂದು ಜಯಭೇರಿ ಹೊಡೆದಿದ್ದನು. ಆ ಕಡೆ ನೋಡಿದರೆ ಬಂಡೆಯ ಮೇಲೆ ಚರಿತ್ರೆಯನ್ನು ಕೆತ್ತುತ್ತ ಇನ್ನಿಬ್ಬರು ಕುಳಿತಿದ್ದರು ಬಾಳೆಯ ಹಣ್ಣಿನ ಚೀಲವನ್ನು ಹೊತ್ತು ಹೊತ್ತು ತಂದ ಮತ್ತೊಬ್ಬನು ಈ ಸ್ಥಳ ಚೆನ್ನಾಗಿದೆ ಇಲ್ಲೇ ಹಣ್ಣು ತಿನ್ನೋಣ ಎಂದು ಸಲಹೆ ಕೊಡುತ್ತಿದ್ದನು. ನನಗೆ ಮೈಯೆಲ್ಲಾ ಕಾಲೇ ಇದ್ದಂತೆ ತೋರುತ್ತಿತ್ತು. ಹಿಂದಿನ ಸೈನ್ಯ ನಿಪುಣರೊಬ್ಬರು ಹೇಳಿದ್ದರಂತೆ ಸೈನ್ಯವು ಹೊಟ್ಟೆಯ ಮೇಲೆ ನಡೆಯುವುದೆಂದು ಇದು ನಿಜವಾಗಿಯೂ ನಡೆದಿದ್ದು ನನ್ನ ಹೊಟ್ಟೆಗೆ ಕಾಲುಗಳು ಬಂದಂತಾಗಿತ್ತು. ಉಸಿರಾಡುವುದನ್ನು ಹತೋಟಿಗೆ ತರುವುದರಲ್ಲಿ ಮಾತೇ ಹೊರಡದೆ ಸುಮ್ಮನೆ ಗಂಭೀರವಾಗಿ ಕುಳಿತೆ.

ಅಂತೂ ಇಂತೂ ಬಹುಮತದ ಫಲವಾಗಿ ಬಾಳೆಹಣ್ಣು ಮುಗಿಯಿತು. ನಾವೂ ಮುಂದೆ ಹೊರಟೆವು, ಹಿಂತಿರುಗಲು, ಇಳಿದು ಬರಬರುತ್ತಾ ಇನ್ನೇನು ಬೆಟ್ಟ ಇಳಿದಾಯಿತು. ನೆಲ ಸಿಕ್ಕಿತು ಎನ್ನುವ ವೇಳೆಗೆ ಎಲ್ಲರೂ ಕೈಯಿನ ಚಪ್ಪಲಿಯನ್ನು ಕಾಲಿಗೆ ಹಾಕಿಕೊಂಡು ನಡೆಯಲಾರಂಭಿಸಿದರು. ಕಲ್ಲಿನ ಮೇಲೆ ನಡೆಯಬೇಕಾದುದು ಮುಗಿದಿರಲಿಲ್ಲ. ಹಾಗಾಗಿ ಕಲ್ಲುಚೂರುಗಳು ಚಪ್ಪಲಿಯೊಳಕ್ಕೆ ಸೇರಿಕೊಂಡು, ನನಗೆ ಮುದಕರಿನಾಯಕನು ಇಲ್ಲಿ ಹೇಗೆ ನಡೆಯುತ್ತಿದ್ದ ಎಂದು ಅನುಮಾನವನ್ನುಂಟು ಮಾಡಿತು.

ಆ ವೇಳೆಗೆ ಅರ್ಜುನನು ಗಾಂಢೀವವನ್ನು ಕೆಡವಿಕೊಂಡು, ಜಾರಿ ಬಿದ್ದ ಕಲ್ಲ ಮೇಲೆ.

ನಕುಲನು ಮುಳ್ಳಿನ ಮೇಲೆ ಕಾಲಿಟ್ಟು ಜೀವಾಮೃತದ ನಟರಾಜನಂತೆ ಕುಣಿವ ಭಂಗಿಯನ್ನು ಹೂಡಿದ್ದ.

ಶಕುನಿಯು ನಾಯಿ ಮೂಳೆಯ ಚೂರ ಮೇಲೆ ಕಾಲಿಟ್ಟು ಇದರಿಂದ ದಾಳ ಮಾಡಬಹುದೇ ಎಂದು ಯೋಚಿಸುತ್ತಿದ್ದ.

ಶ್ರೀಕೃಷ್ಣನು, ಹಲ್ಲಿಯೊಂದರ ಬಾಲದ ಮೇಲೆ ಕಾಲಿಟ್ಟು ವೈಬೆವರಿ ಬಂಡೆಯ ಮೇಲೆ ಒಡಲಶಯನನಾಗಿದ್ದ.

ದುರ್ಯೋಧನನು ತೊಡೆಯ ಮೇಲೆ ನಡೆವವನಂತೆ ತತ್ತರಿಸುತ್ತಿದ್ದ.

ಕರ್ಣನು ಕಿವಿ ಕೆರೆದು ಕೊಳ್ಳುತ್ತಾ ಹಿಂದೆ ಬರುತ್ತಿದ್ದ.

ಮಹಾ ಭಾರತಕ್ಕೆ ಭಾರತವೇ ಬಂದಿಳಿದಂತಾಯಿತು.

ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲದಂತಾಗಿ ಮೈ ಕೈ ತರಚಿಕೊಂಡು ಊರೊಳಗೆ ಹೋಗಿ ಮನೆ ಸೇರಿಕೊಂಡೆವು.

[ನಿಮ್ಮ ಪ್ರವಾಸದ ಮೇಲೊಂದು ಹರಟೆಯನ್ನು ಬರೆಯಿರಿ ಎಂಬ ಪ್ರಶ್ನೆಗೆ ಉತ್ತರವಾಗಿ ಬಂದ ಹರಟೆ ಇದು. ಸಂ.]

ಪರೀಕ್ಷೆ

ರಂಗಣ್ಣನವರೂ ಅವರ ಸಕುಟುಂಬವೂ ಸೋಮವಾರ ಸಂಜೆ ನಮ್ಮೂರಿಗೆ ಬರುವುದಾಗಿ ಗೊತ್ತಾಗಿತ್ತು. ಭಾನುವಾರ ಊರಿಗೆ ಬಂದು ಬಿಡಬೇಕೆಂದು ನನಗೂ ಕಾಗದ ಬಂದಿತ್ತು. ಆ ಕಾಗದ ಬಂದಾಗ ನನಗೂ ನನ್ನ ಸಹ ಕೋಣನಾದ ವಿಶುವಿಗೂ ಮಾರಾ ಮಾರಿಯಾಗುತ್ತಿತ್ತು. ನಾನೂ ಅವನೂ ಒಬ್ಬರನೊಬ್ಬರು ಬಿಗಿಹಿಡಿದು ನೆಲದ ಮೇಲೆ ಉರುಳುತ್ತಿದ್ದೆವು. ಇನ್ನೇನೂ ಇಲ್ಲ ನಡೆದದ್ದಿಷ್ಟೇ! ನಾನೂ ಅವನೂ ಹಾಯಾಗಿ ನಮ್ಮ ನಮ್ಮ ಪಾಠಗಳನ್ನ ಗಂಟಲೊಳಕ್ಕೆ ಇಳಿಸುತ್ತಿದ್ದೆವು. ಕುರ್ಚಿಗಳಲ್ಲಿ ಕೂತು, ಕುರ್ಚಿಗಳ ಬೆನ್ನ ಮೇಲೆ ಕಾಲೇರಿಸಿ ಕಲಿಕೆಗೆ ಕಳೆಕಟ್ಟಿದ್ದೆವು. ಎದುರುಬದುರಾಗಿ ಕುಳಿತಿದ್ದರಿಂದ ನಮ್ಮ ನೀಡಿದ ಕಾಲುಗಳು ಒಂದು ಸಾರಿ ತಗುಲಿದುವು. ಆಗ ವಿಶು ನನ್ನ ಹಿಮ್ಮಡಿಯನ್ನು ಬಲವಾಗಿ ಒತ್ತಿದ. ನಾನೂ ಒತ್ತಿದೆ. ಆಗ ಅವನು ಲೋ! ಮಂಡಿ ಮಡಿಸದೆ ನನ್ನನ್ನ ಹಿಂದಕ್ಕೆ ತಳ್ಳು! ನೋಡೋಣ ಅಂದ. ನಾವಿಬ್ಬರೂ ನೆಲದ ಮೇಲೆ ಕುಳಿತು ಪರಸ್ಪರ ಪಾದ ಯುದ್ಧ ಪ್ರಾರಂಭ ಮಾಡಿದುವು. ಆ ಮೇಲೆ ಒಬ್ಬರ ಮೇಲೊಬ್ಬರು ರೇಗಿ ಉರುಳಾಡಲಾರಂಭಿಸಿದೆವು. ಗುದ್ದುಗಳೂ ಗರ್ಜನೆಗಳೂ ಹೊರಹೊಮ್ಮಿದುವು.

ಸ್ನೇಹಿತರು ಅಂದರೆ ಹೀಗೆಯೇ. ಕಂಡ ತಕ್ಷಣ ಕೆನ್ನೆಗೆ ಹೊಡೆಯುವುದು, ಬೆನ್ನಿಗೊಂದು ಬಾರಿಸುವುದು, ಕಿಸೆಯೊಳಕೆ ಕೈಬಿಡುವುದು, ಮೀಸೆ ಎಳೆಯುವುದು, ಹೀಗೆ ವೇದನಾಕಾರಕ ಚೇಷ್ಟೆಗಳನು ಮಾಡುವುದೇ ಗೆಳೆತನದ ಗುರುತು! ಕೆಲದಿನಗಳ ಹಿಂದೆ ನಾನು ಹೈಕೋರ್ಟು ಹತ್ತಿರ ಹೋಗಿದ್ದೆ. ಇಬ್ಬರು ಲಾಯರುಗಳು ತುಂಬಾ ಹಳಬರು. ಕರೀ ಅಲ್ಪಾಕಾ ಕೋಟು ಹಳದಿಗೆ ತಿರುಗಿದೆ—ಪರಸ್ಪರ ಗೆಳೆತನದ ಗುದ್ದಾಟದಲ್ಲಿ ತೊಡಗಿದ್ದರು ನಾನು ನೋಡುತ್ತಿದೆನಲ್ಲ ಎಂಬ ಜ್ಞಾನ ಕೂಡ ಇಲ್ಲ ಅವರಿಗೆ ಆ ವೈಮರವೆಯಲ್ಲಿ! ಕದನ ನಾಚಿಕೆಯಾಗಿ ನಾನೇ ಕಣ್ಣು ಮುಚ್ಚಿಕೊಳ್ಳಬೇಕಾದ ಸಂದರ್ಭ ಬಂತು ಯಾಕೆಂದರೆ, ಅವರಿಬ್ಬರೂ ಉದರಮರ್ದನಕ್ಕೆ ಪ್ರಾರಂಭಿಸಿಬಿಟ್ಟರು. "ಯಾಕೊ ಹೀಗಾಗಿ ಬಿಟ್ಟಿದೆ ನಿನ್ನ ಅವಸ್ಥೆ....ಗುಂಡಿಗಳೆಲ್ಲಾ ಒದ್ದಾಡುತ್ತಿವೆಯಲ್ಲೋ" ಅಂತ ಹೇಳುತ್ತಾ ಒಬ್ಬರು ಮುಷ್ಟಿ ಬಿಗಿದು ನೇರವಾಗಿ ಒಂದು ಪೆಟ್ಟನ್ನು ಕೊಟ್ಟರು. ಅದನ್ನು ತಡೆದು ನಿಲ್ಲಿಸಲಾಗದೆ, ನೋವನ್ನು ನುಂಗಿ ಕೃತ್ಯ ನಡೆದ ಸ್ಥಳವನ್ನು ಸವರುತ್ತಾ, ಅವರು ತಮ್ಮ ಎರಡೂ ಮುಷ್ಟಿಗಳಿಂದ ಎದುರುಗಿದ್ದ ಸ್ನೇಹಿತನ ಉದರಕ್ಕೆ ಬಡ್ಡಿಸಹಿತವಾಗಿ ಸಾಲತೀರಿಸಿದರು. ಅಷ್ಟು ಹೊತ್ತಿ

ಗೆ ಸರಿಯಾಗಿ ಮತ್ತೊಬ್ಬ ಮಹಾಲಾಯರು ಮರೆಯಲ್ಲೇ ನಿಂತು ಇಬ್ಬರ ತಲೆ ಬುರುಡೆಗಳ ಮೇಲೂ ಕೇಸಿನ ಕಟ್ಟಿಂದ ಒಂದೊಂದು ಬಿಟ್ಟರು !

ಅವರ ವಿಷಯ ಹಾಗಿರಲಿ ! ವಿಶುವೂ ನಾನು ನಮ್ಮ ಹೊಡೆದಾಟದ ಗೌರೀ ಶಂಕರದಲ್ಲಿದ್ದಾಗ ಬಾಗಿಲಲಿ 'ಪೋಸ್ಟ್' ಎಂಬ ಕೂಗುಕೇಳಿತು. ತೆಗೆದು ಓದಿ ದಿಗ್ಭಮೆ ಹಿಡಿದು ಮೂಲೆಯಲ್ಲಿ ನಿಂತಾಗ ವಿಶು ಬಂದ ಕೋಡೋ ಅಂದ. ಬಿಡೋ, ಅಂದೆ ಬಿಡಲಿಲ್ಲ ಹಾಳಾದವನು ಓದಿಯೇ ಬಿಟ್ಟ ನನ್ನ ಮುಖ ಕೆಂಚಗಾಯಿತು. ನನ್ನನ್ನುಹಿಡಿದು ತಿರುಗಿಸಿ ಅಲ್ಲಾಡಿಸಿ ಒದ್ದುಗುದ್ದಿ ಗೋಡೆಗೆ ಸೇರಿಸಿ ನಿಲ್ಲಿಸಿ "ಕಲ್ಯಾಣಿ ಕಲ್ಯಾಣ ಕಲ್ಯಾಣೀ ಹೈ" ಎಂದು ಹಾಡಲುಪಕ್ರಮಿಸಿದ. ಹೋಗೋ ಹುಚ್ಚ? ಅಂದೆ. ಆ ದಿನ ರಾತ್ರಿ ವಿಶುರೆಯಿಲು ಸ್ಟೇಷನ್ನಿಗೆಬಂದು ನನಗೆ ಟಿಕೇಟು ತೆಗೆದುಕೊಟ್ಟ.

ರಂಗಣ್ಣನವರ ರೈಲು ನಮ್ಮೂರಿಗೆ ನಾಲ್ಕು ಗಂಟೆಗೆ ಬರುತ್ತಾದರೂ, ನನ್ನ ಅಲಂಕಾರ ಎರಡು ಗಂಟೆಗೇ ಮೊದಲಾಯಿತು. ನನಗೊಂದು ಜರತಾರಿ ಪಂಚೆಯನ್ನೂ ರೇಷ್ಮೆ ಷರ್ಟನ್ನೂ ತಾಯಿ ತಂದುಕೊಟ್ಟರು. ಅಕ್ಕ ತಲೆ ಬಾಚಿದಳು. ಹಣೆಗೆ ಸಾದಿನ ಬೊಟ್ಟು ಹಾಕಿರಿ ಎಂದು ತಂದೆಯವರು ಹೇಳಿ ಕಳುಹಿಸಿದರು.

ರೈಲು ಸರಿಯಾಗಿ ಬಂದು ತಲುಪಿತು. ನಾಲ್ಕು ಜನರು ಮನೆ ಮುಂದೆ ಗಾಡಿಯಿಂದಿಳಿದರು-ಇಬ್ಬರು ಸ್ತ್ರೀಯರು, ಇಬ್ಬರು ಪುರುಷರು. ಕಡೆಗಿಳಿದವರೇ ಸಾಕ್ಷಾತ್ ರಂಗಣ್ಣನವರು ! ಮತ್ತೊಬ್ಬರು ಅವರ ಭಾವ ಮೈದುನರಂತೆ. ರಂಗಣ್ಣನವರ ಊರಲ್ಲೇ ಲಾಯರ್ ಕೆಲಸದಿಂದ ತೊಡಗಿರುವ ಯುವಕರು. ವರದಕ್ಷಿಣೆ ಮುಂತಾದ ವಿಷಯಗಳನ್ನು ಚರ್ಚಿಸಿ ಇತ್ಯರ್ಥ ಮಾಡಲು ಆತನನ್ನು ರಂಗಣ್ಣನವರು ಪ್ರತ್ಯೇಕವಾಗಿ ಕರೆತಂದಿರಬಹುದೆಂದು ಅಕ್ಕ ಹೇಳಿದಳು. ಮಹಿಳೆಯರಲ್ಲಿ ಒಬ್ಬರು ರಂಗಣ್ಣನವರ ಕೈ ಹಿಡಿದವರು; ಮತ್ತೊಬ್ಬರು, ಅವರ ಜೇಷ್ಠ ಪುತ್ರಿ. ತಾಯಿಯ ವಿನಯ ಗರತಿಗೊಪ್ಪುವ ನಡಿಗೆ, ಮುಂತಾದುವು ನನ್ನ ಮನಸ್ಸನ್ನು ಸೂರೆ ಮಾಡಿದುವು. ರಂಗಣ್ಣನವರು ಶ್ರೀಮಂತರೆಂಬುದಕ್ಕೆ ಆಕೆ ಧರಿಸಿದ ಬೆಂಗಳೂರು ಕಲಾಪತ್ತಿನ ಸೀರೆ, ಕಾಸಿನಸರ ಕೆಂಪು ಕಲ್ಲಿನ ಓಲೆ, ಕೈಬಳೆಗಳು ಇವು ಪ್ರಚಾರ ಮಾಡಿದುವು. ಮಗಳಿಗೆ ಹದಿನಾರು ವರ್ಷ ವಯಸ್ಸಿರಬಹುದು. ಹೊಳೆವ ಕಣ್ಣುಗಳು ತೆಳ್ಳನೆ ಬೆಳ್ಳನೆ ಬೆಳೆದ ದೇಹ, ಹಳದಿ ಅಂಚಿನ ಕಂದು ಬಣ್ಣದ ಧರ್ಮಾವರ, ನೀಲೀ ರವಕೆ....ಮನೆಯೊಳಕ್ಕೆ ಹೋಗುವ ಮೊದಲು ಅವಳು ನನ್ನನ್ನು ಒಂದು ಸಾರಿ ನೋಡಿದಾದ ನನಗೆ ಕೊಂಚ ದಿಗಿಲಾಯಿತು. ಏಕೆಂದರೆ, ಗುಣಾವಗುಣಗಳನ್ನೆಲ್ಲ ಒಂದೇ ನೋಟದಿಂದಲೇ ತೂಕ ಮಾಡಿ ನಿರ್ಧರಿಸುವಂತಿತ್ತು, ಆಕೆಯ ನೋಟ.

ಹೊರಗಿನ ವರಾಂಡದಲ್ಲಿ ತೂಗು ಮಂಚದಲ್ಲೇ ರಂಗಣ್ಣನವರೂ ತರುಣ


ಲಾಯರೂ ಕುಳಿತರು. ಆದರೆ, ರಂಗಣ್ಣನವರು ಮಾತ್ರ ಕುಳಿತ ಕೂಡಲೇ ಎದ್ದು ಅತ್ತಲಿಂದಿತ್ತಲೂ ಇತ್ತಲಿಂದತ್ತಲೂ ಬೀದಿಗೆ ಇಳಿದು ಎದುರು ಮನೆ ಜಗುಲಿಯ ಮೇಲೆ ಕುಳಿತು ಶೀತರು. ಒಂಟಿ ಶೀನು. ಆಗ ನಮಗರ್ಥವಾಯಿತು. ಅವರ ಅವಾಂತರದ ಗೂಡಾರ್ಥ.

ರಂಗಣ್ಣನವರು ಆ ಒಂಟಿ ಶೀನನ್ನು ನಮ್ಮ ಮನೆಯಲ್ಲಿ ಶೀತಿದ್ದರೆ...., ಕಲ್ಯಾಣಿ ನಮ್ಮ ಸಹ ಧರ್ಮಿಣಿ ಆಗುತ್ತಿರಲಿಲ್ಲ

ನನ್ನ ಮಟ್ಟಿಗೆ, ಆ ಇಬ್ಬರು ಲಲನಾಮಣಿಯರನ್ನು ಕಂಡ ಕೂಡಲೇ, ನಾನು ಕಲ್ಯಾಣಿಯ ಕರಗ್ರಹಣಕ್ಕೆ ಒಪ್ಪಿಬಿಟ್ಟಿದ್ದೆ. ಒಂಟಿ ಶೀತರೂ ಸರಿ ಪುಂಖಾನುಪುಂಖವಾಗಿ ಶೀತರೂ ಸರಿ, ನಾನೇನೋ ಹೆಣ್ಣನ್ನೊಪ್ಪಿದೆ.

(ಎಸ್ ವೀ. ವೀ. ಕೃತಂ)

ಮುಂದಿನ ಸಂಚಿಕೆಯಲ್ಲಿ "ಪ್ಯಾಸಾದೆ"



''ನಮ್ಮಪ್ಪ ಸಾಯೋಕ್ಮೊದಲೆ ಅವನಿಗೆ ತಾನು ಸಾಯ್ತ್ನಿ ಅಂತ ಅವನಿಗೆ ಗೊತ್ತಿತ್ತು''

"ಅಷ್ಟೇನು ಸೊಡ್ಡ ಜ್ಞಾನಿಂತ ಕಾಣ್ತದೆ. ದೇವರ್ ಬಂದ್ ಹೇಳ್ದಾಂತ ಕಾಣಾಸ್ತದೆ"

"ಅದೇನು ಇಲ್ಲ. ಜಡ್ಜಿ (Judge) ಹೇಳ್ದ"

"ನಾಯಿಗಳಿವೆ-ಎಚ್ಚರಿಕೆ"

ಮೊನ್ನೆಯ ದಿನ ನನ್ನ ಹಳೆಯ ಸ್ನೇಹಿತ ರಾಮರಾಯನ ಮನೆಗೆ ಹೋಗಿ ಮಕ್ಕಳು ಮರಿಗಳನ್ನು ನೋಡಿಕೊಂಡು ಬರೋಣವೆಂದು ಹೊರಟೆ. ಮನೆಯ ಬಾಗಿಲಿಗೆ ಹೋಗುವ ವೇಳೆಗೆ ಮೊದಲು ಕಣ್ಣಿಗೆ ಕಂಡಿದ್ದು ಹೆಬ್ಬಾಗಿಲಿನ ಮೇಲೆ ತೂಗು ಹಾಕಿದ್ದ ಬೋರ್ಡೊಂದು.

"ನಾಯಿಗಳಿವೆ-ಎಚ್ಚರಿಕೆ"

ಹೆಬ್ಬಾಗಿಲ ಬಳಿ ಶ್ರೀ ರಾಮರಾಯರು ಎಂದು ಬೋರ್ಡು ಹಾಕುವುದನ್ನು ನೋಡಿದ್ದೇನೆ. ದೇವರ ಹೆಸರನ್ನು ಮನೆಗೆ ಇಟ್ಟು ದೇವಕೃಪ ಎಂದು ಬೋರ್ಡು ಹಾಕುವುದನ್ನು ಕಂಡಿದ್ದೇನೆ. ಆದರೆ ನಾಯಿಗಳಿವೆ ಎಂಬ ಬೋರ್ಡು ಹಾಕಬೇಕಾದರೆ ಮನೆಯಲ್ಲಿ ನಾಯಿಗೇ ಪ್ರಾಧಾನ್ಯ ಕೊಟ್ಟಂತಾಗುವುದಿಲ್ಲವೇ. ಮನೆಯ ಯಜಮಾನರು ಅನಾಮಧೇಯನಾಗಬೇಕೆ? ಇವೆಲ್ಲವೂ ಕಾಲ ಮಹಾತ್ಮೆಯೇ ಅಲ್ಲಾ ಕಾಲ ಭೈರವನ ಉತ್ತೀರ್ಣಕಾಲವೇ? ಏನೊಂದೂ ತೋರಲಿಲ್ಲ. ಇರಲಿ ರಾಮರಾಯನನ್ನೇ ಕೇಳಿದರೆ ಗೊತ್ತಾಗಬಹುದು ಎಂದು ಗೇಟಿನಾಚೆಯಿಂದಲೇ "ರಾಮರಾಯರೇ" ಎಂದು ಕೂಗು ಹಾಕಿದೆ. ಸದ್ದಿಲ್ಲ ಗದ್ದಲವಿಲ್ಲ ಆ ವೇಳೆಗೆ ದಾರಿಯಲ್ಲಿದ್ದ ಹುಡುಗರೆಲ್ಲ ನನ್ನನ್ನೇ ನೋಡುವುದಕ್ಕೆ ಆರಂಭಿಸಿದ್ದರು. ಎಷ್ಟೇ ಆಗಲಿ ಧಾಂಡಿಗನಂತಿರುವವನು ಮನೆಯ ಬಾಗಿಲಲ್ಲಿ ಬಂದು ಅರಚಿಕೊಳ್ಳುತ್ತಿದ್ದರೆ ಬೀದಿ ಹುಡುಗರಿಗೆಲ್ಲಾ ಹಾಸ್ಯದಾಯಕವೇ ಅನ್ನಿ. ಈ ಹುಡುಗರ ಕಾಟಕ್ಕಾದರೂ ಮನೆಯ ಒಳಕ್ಕೆ ಹೋಗೋಣ ಎಂದರೆ ನಾಯಿಗಿಂತ ಹೆಚ್ಚಾಗಿ ಬೋರ್ಡಿನ ಭಯ. ಇನ್ನೊಂದು ಬಾರಿ ಕೂಗಿದೆ. ಮತ್ತೊಂದು ಬಾರಿ ಕೂಗಿದೆ. ಮಗುದೊಂದು ಬಾರಿ ಕೂಗಿದೆ. ಬರೆಯುವುದಕ್ಕೆ ಬೇಜಾರು ಬರುವಷ್ಟು ಬಾರಿ ಕೂಗಿದೆ. ನಿಷ್ಪ್ರಯೋಜಕ. ಮನೆಯಿಂದ ಸದ್ದೇ ಇಲ್ಲ. ಕಡೆಗೆ ಮಾರ್ದನಿಯೂ ಕೂಡ ಬರಲಿಲ್ಲ. ಅಷ್ಟು ಹೊತ್ತಿಗೆ ಹುಡುಗರ ಗುಂಪೂ ಹೆಚ್ಚಾಗಿ ಸೇರಿತ್ತು. ಒಂದು ಬಾರಿ ಗುಂಪಿನ ಕಡೆ ನೋಡುವುದು, ಇನ್ನೊಂದು ಬಾರಿ ಮನೆಯ ಕಡೆಗೆ ಕೂಗುವುದು. ಉತ್ತರ ನಿರರ್ಥಕ. ಕಡೆಗೆ ರಸ್ತೆಯಲ್ಲಿ ಬಿದ್ದಿದ್ದ ಒಂದು ಕಲ್ಲನ್ನು ತೆಗೆದು ಮನೆಯ ಮೇಲೆ ಎಸೆದೆ. ನನ್ನ ಪುಣ್ಯ ಮನೆಯೂ ಹೆಂಚಿನ ಮನೆ. ಕಲ್ಲು ಬೀಳುತ್ತಲೂ ಒಳಗಡೆಯಿಂದ ಜೀವಂತ ಶಬ್ದಗಳು ಬಂದವು. ಯಾರೋ ಅದು........ಮಗ' ಏಕೋ ತಿಂದು ಹೆಚ್ಚಿದೆಯೇನೊ' ಇತ್ಯಾದಿ ಬಾಯಿ ಬಿಟ್ಟುಕೊಂಡು ಸ್ವಯಂ ರಾಮರಾಯನೇ ಹೊರಕ್ಕೆ ಬಂದ. ಅವನು ನನ್ನನ್ನೂ ನೋಡಿ ಜ್ಞಾನ ತಪ್ಪಿದೆಯೇನೊ ಎನ್ನುವ ಮೊದಲೇ "ಏನೋ ಸತ್ತು ಹೋಗಿದ್ದಿಯೇನೊ ಎಷ್ಟು ಕೂಗಿದರೂ ಬರಲೊಲ್ಲೆ" ಎಂದೆ. "ನಿನಗೇನು ಬಂತೊ ಕೂಗು

ವುದಕ್ಕೆ ಒಳಕ್ಕೆ ನೆಟ್ಟಗೆ ಬರಲು ಕಾಲಿತ್ತಲ್ಲವೇ. ದಿನಾಗಲೂ ಲಗ್ಗೆ ಹತ್ತಿ ಒಳಕ್ಕೆ ಬಂದು ನನ್ನನ್ನು ಗೋಳು ಹುಯ್ಯುತ್ತಿದ್ದ ನಿನಗೆ ಇವತ್ತೇನೊ ಇಷ್ಟು ಮರ್ಯಾದೆ. ಕ್ರಾಸ್‌ವರ್ಡ್ ಮಾಡುತ್ತಾ ಇದ್ದೆ. ಅದು ಮಾಡುವಾಗಲೆಲ್ಲಾ ಏಕಾಗ್ರಚಿತ್ತತೆ. ಹಾಗಾಗಿ ನೀನು ಕೂಗಿದ್ದು ಕೇಳಿಸಲಿಲ್ಲ."

ನಾನು ಮರು ಮಾತಾಡದೆ ಬೋರ್ಡನ್ನು ತೋರಿಸಿದೆ. ಅವನು ಘೊಳ್ಳನೆ ನಗಲಾರಂಭಿಸಿದ. 'ಬಾ ಒಳಕ್ಕೆ ಬಾ ಎಲ್ಲಾ ಹೇಳುತ್ತೇನೆ' ಎಂದು ಒಳಕ್ಕೆ ಕರೆದುಕೊಂಡು ಹೋದ.

ವರಾಂಡಾದಲ್ಲಿ ಸಾವಧಾನವಾಗಿ ಕೂತುಕೊಂಡು ಎಂದಿನಂತೆ ಹುರಿಗಾಳು ತಿನ್ನುತ್ತಾ ಹೇಳ ತೊಡಗಿದ.

"ನೋಡು ಅನಾಥ ಬಾಲಕರು, ನಾಥಬಾಲಕರು, ಹರಿಕಥೆಯವರು, ಶಿವಕಥೆಯವರು, ದೇಶ ಸೇವಕರು, ಸ್ವಯಂ ಸೇವಕರು. ಹಾಲಿನವರು, ಸಾಲದವರು, ತಿರುಕರು, ತುಂಡರು, ಇಂತಹವರೆಲ್ಲಾ ಬೆಳಗಿನಿಂದ ಸಾಯಂಕಾಲದವರೆಗೆ ಬಂದು ಒಂದು ನಿಮಿಷ ನಮ್ಮ ಕೆಲಸ ನಾವು ಮಾಡುವುದಕ್ಕೆ ಬಿಡುವುದಿಲ್ಲ. ಹೀಗಾಗಿ ಊರನ್ನೇ ಬಿಟ್ಟು ಎಲ್ಲಿಯಾದರೂ ಹೋಗಿಬಿಡೋಣವೇ ಎನ್ನುವಷ್ಟು ಬೇಜಾರಾಗಿ ಹೋಗಿತ್ತು. ಆಗ ನಮ್ಮಾಕೆ ಒಂದು ಸಲಹೆಯನ್ನು ಕೊಟ್ಟಳು. ಈ ರೀತಿ ಒಂದು ಬೋರ್ಡು ಹಾಕಿಬಿಡಿ ಯಾರು ಕೂಗಿಕೊಂಡರೂ ರಸ್ತೆಯಿಂದಲೇ ಕೂಗುತ್ತಾರೆ ನಮಗೆ ಏನೂ ಗೋಳು ಆಗುವುದಿಲ್ಲ ವೆಂದು. ನಾಯಿ ಎಲ್ಲಿ ತರುವುದೇ ನಾಯಿ ತಂದರೂ ಅದಕ್ಕೆಲ್ಲ ಈ ಓಡಾಡುವ ತರಕಾರಿ ಹೊಂದಿಸುವುದೇ ಎಂದು ಕೇಳಿದೆ. ಛೇ ಬೋರ್ಡಿದ್ದ ಮಾತ್ರಕ್ಕೆ ನಾಯಿಯು ಇರಲೇಬೇಕೇ? ಸುಮ್ಮನೆ ಬೋರ್ಡು ಹಾಕಿಬಿಡಿ ಎಂದಳು. ಇದು ಯಾಕೋ ಒಳ್ಳೆಯ ಯೋಚನೆಯೆಂದೇ ತೋರಿತು. ಅಷ್ಟರವೇಳೆ ಇಕ್ಕಟ್ಟಿನ ಪ್ರಸಂಗ ಒದಗಿದರೆ ಇದ್ದೇ ಇದೆ ಚಂದ್ರಹರಿಯ ಚಾಣಿಕ್ಯತನ. ಮೊನ್ನೆ ತಾನೇ ಮನುಷ್ಯ ಕೆಮ್ಮಿಲು ಬಂದು ನಾಯಿ ಸತ್ತು ಹೋಯಿತು ಎನ್ನುವುದು ಎಂದುಕೊಂಡು ಒಂದು ಬೋರ್ಡನ್ನು ಬರೆದು ಇವತ್ತು ಮಧ್ಯಾಹ್ನ ತಾನೇ ಗೇಟಿಗೆ ತಾಕಿಸಿದೆ. ಅವರಿಂದ ನಮ್ಮ ಇಷ್ಟಾರ್ಥವು ನೆರವೇರಿದಂತೆಯೇ. ನೀನು ಕೂಡ ಗಾಬರಿಪಟ್ಟುಕೊಂಡು ಹೊರಗಿನಿಂದಲೇ ಹೊಡೆದುಕೊಂಡೆ" ಎಂದು ಮುಗಿಸಿದ.

"ಮೊದಲು ಕೂಗುತ್ತಿದ್ದವರು ಈಗ ಹೆಂಚು ಮುರಿಯುತ್ತಾರಲ್ಲಯ್ಯ. ತಾರ್ಸಿ ಮನೆಯವರು ಹೀಗೆ ಮಾಡಿದರೆ ಸಾರ್ಥಕ ನೀನು ಮುಂದಾಲೋಚನೆ ಮಾಡಿದಂತೆ ಕಾಣಿಸಲಿಲ್ಲ" ಎಂದೆ.

ಆ ವೇಳೆಗೆ ಯಾರೋ ಆಗಂತುಕರು ವರಾಂಡಾ ಬಳಿಯಲ್ಲಿ ಸುಳಿದಾಡುತ್ತಿದ್ದರು. ಹಿಂತಿರುಗಿ ನೋಡಿ ರಾಮು ಯಾರೋ ಬಂದಿದ್ದಾನೆ ಎಂದೆ. "ಯಾರ್ರಿ ಏನುಬೇಕ್ರಿ" ಎಂದು ರಾಮುವು ಕೇಳುವ ಹೊತ್ತಿಗೆ ಬಂದಿದ್ದ ಆಳು ಮುಂದಾಳಾಗಿ ವರಾಂಡಾಕ್ಕೆ ಬಂದು "ಸ್ವಾಮಿ ಶ್ರೀ ಭೀಮರಾಯರ ಹತ್ತಿರ ಹೋಗಿದ್ದೆ ಅವರು

ತಮ್ಮಲ್ಲಿಗೆ ಹೋಗ ಹೇಳಿದರು. ತಾವು ವಿಮೆ ಮಾಡುತ್ತೀರೆಂದು ಕೇಳಿದೆ. ಅದಕ್ಕಾಗಿ ಬಂದೆ. ನಾನು ಯಮ ವಿಜಯಾ ಕಂಪೆನಿಯ ಏಜಂಟು " ಎಂದು ಹೇಳಿದ.

'ಹಿರಿ ಬಾಗಿಲ ಬಳಿಯ ಬೋರ್ಡು ನೋಡಲಿಲ್ಲವೇ' ಎಂದ


ನೋಡಿದೆ ಸ್ವಾಮಿ. ಆದರೆ ನಾಯಿಗಳು ನಮ್ಮನ್ನೇನು ಮಾಡುತ್ತವೆ ? ಅವಕ್ಕೆಲ್ಲಾ ಹೆದರಿದರೆ ನಾವು ಬದುಕಲಾಗುತ್ತದೆಯೇ ಎಂದ.

ನಾನು ರಾಮುವನ್ನು ನೋಡಿದೆ

" ಬೋರ್ಡು '' ಎಂದೆ

ರಾಮುವು ಅವನನ್ನು ನೋಡಿದ

ರಾಮರಾಯನ ಮನೆಯ ಬಾಗಿಲ ಬೋರ್ಡು ಈಗ ಇಲ್ಲ.



''ನಾನು ಹೇಳಿದಹಾಗೆ ಕಿಟಕಿಗಳನ್ನೆಲ್ಲಾ ತೆರೆದಿಟ್ಟು ಮಲಗಿಕೊಂಡಿಯಾ ನೆನ್ನೆ ರಾತ್ರಿ ?''

''ಹೂಂ''

''ಹಾಗಾದರೆ ಈಗ ಆ ತಲೆಯನೋವು ಮಾಯವಾಗಿರಬೇಕಲ್ಲಾ''

"ಆಗಿದೆ ಸಾರ್ ; ತಲೆಯನೋವಿನ ಜೊತೆಗೆ ನನ್ನ ಕನ್ನಡಕ, ಗಡಿಯಾರ ಪರ್ಸು ಎಲ್ಲಾ ಮಾಯವಾಗಿದೆ''

ನಾಟಕ ಕರ್ತೃ

●

ಈತ:-(ಬಿಸುಸುಯ್ಯುತ್ತಾ) ದೀಪಾವಳಿ ಹೊತ್ತಿಗೆ ಈ ಮಹಾರಾಯನ ನಾಟಕ ರೆಡಿಯಾಗುವ ಹಾಗೆ ಕಾಣೆ, ಸ್ವಾಮಿ!

ಈತ:-ಈ ಸಾಹಿತಿಗಳೇ ಹೀಗೆ, ಕಂಟ್ರಾಕ್ಟರೇ! ಕೈಯಲ್ಲಿ ಹತ್ತು ಕಾಸಿಲ್ಲದಿದ್ದರೂ ಪಿತ್ತ ಮಾತ್ರ ನೆತ್ತಿಗೇರಿಬಿಡುತ್ತದೆ, ಇವರಿಗೆ ಕಾಡಿನ ಘರದೆ ಯಾವುದೂ ಊರಿನ ಘರದೆ ಯಾವುದು ಅಂತ ಹೇಳುವುದಕ್ಕೆ ಬರುವುದಿಲ್ಲ, ನಮ್ಮಂಥವರನ್ನು ಕಾಯಿಸುತ್ತಾರೆ!............

ಆತ:-ದೀಪಾವಳಿ ದಿನ ವಿಶೇಷ ಪ್ರೋಗ್ರಾಂ ಅಂತ ಆಗಲೇ ಪ್ರಕಟಿಸಿ ಬಿಟ್ಟಿದ್ದೇವೆ!

ಈತ:-ಪ್ರಕಟಿಸದೆ? ಅವನು ಬರಲಿ, ಬರದೆ ಇರಲಿ, ನಾಟಕವೇನೋ ಸಿದ್ಧ. ಅದರ ವಿಷಯ ನಿಮಗೆ ಯಾಕೆ?........ಆಸಾಮಿ ನಮಗೆ ಕೊಂಚ ಸುಲಭದಲ್ಲೇ ಸಿಕ್ಕಿದಾನೆ. ಪ್ರಪಂಚ ಪರಿಜ್ಞಾನ ಕಡಿಮೆ. ನೀವು ಕೊಡೋ ದುಡ್ಡಿನಲ್ಲಿ ಖರ್ಚು ಕಳೆದು ಉಳಿದಿದ್ದರಲ್ಲಿ ಅರ್ಧ ಆಣೆಯಂತೆ ಇವನು ಬರೆದಿದ್ದಕ್ಕೆ, ರಿಹರ್ಸಲ್ ಮಾಡಿಸಿದ್ದಕ್ಕೆ, ಎಲ್ಲಕ್ಕೂ ಯಾರು ಒಪ್ಪಿಕೊಳ್ಳುತ್ತಾರೆ.... ಹೇಳಿ....ಸಾಹಿತ್ಯ ಪ್ರಪಂಚದಲ್ಲಿ ಹೆಸರಾದವರು?

ಆತ:-ಅದು ಸರಿ! ಅನ್ನಿ! ಅದೂ ಅಲ್ಲದೆ, ನಿಮ್ಮ ಬಲವಂತಕ್ಕೆ ನಾಟಕದ ಹೆಸರನ್ನೇ "ಚಲನಚಿತ್ರ" ಅಂತ ಬದಲಾಯಿಸಿಲ್ಲವೇ ಭೂಪ!

ಈತ:-ಬದಲಾಯಿಸದೆ? ನೋಡಿ ನಾಗರಾಯರೇ? ಇವರನ್ನೆಲ್ಲಾ ಅಟ್ಟದ ಮೇಲೆ ಕೂರಿಸುವುದು ಯಾರು ಅಂತೀರಿ? ಅವರವರೇ? ಒಬ್ಬ ಬರೆದ ಅಂದರೆ ಸರಿ' ನಾಲ್ಕು ಜನ ಅವನನ್ನು ಭುಜದ ಮೇಲೆ ಕೂರಿಸಿಕೊಳ್ಳುವುದು. ಊರೂರು ಮೆರವಣಿಗೆ ಮಾಡಿಸಿ, ಅಕ್ಕಪಕ್ಕದವರಿಂದ ಹಾರ ಹಾಕಿಸುವುದು........ನಾನು ಹೇಳಿದೆ, ಆತನಿಗೆ........"ನಿನ್ನ ಬೇಳೆಕಾಳು ಬೇಯಬೇಕಾದರೆ ಅದಕ್ಕೆ ಬೇರೆ ಹೆಸರಿಡಬೇಕು" ಅಂದೆ. ಚಲನ ಚಿತ್ರಕ್ಕೆ "ನಾಟಕ" ಅಂತ ಹೆಸರಿಡುವಾಗ!........

ಆತ:-ಪಾಪ! ಮಕ್ಕಳೊಂದಿಗನೇನೋ? ಕಾಣೆ! ಇತ್ತೀಚಿಗೆ ಪೂರಾ ಇಳಿದು ಹೋಗಿದಾನೆ........ಆಮಶಂಕೆ ಬೇರೆ ಇದೆಯಂತೆ!

ಈತ:-ಇಕೋ! ಬಂದ!...........ಬನ್ನಿ! ಹುಚ್ಚು ರಾಯರೇ ಬನ್ನಿ!........ ಕೂತುಕೊಳ್ಳಿ....ಅಲ್ಲೇ....ನಮ್ಮ ನಾಗರಾಯರು ಗೊತ್ತಿಲ್ಲವೇ! ಇವರೇ ನಾಟಕದ ಕಂಟ್ರಾಕ್ಟ್ ತೆಗೆದುಕೊಳ್ಳುತ್ತೇನೆ ಎಂದು ಹೇಳಿರುವುದು...........

ರಾಯರು:-**ನಮಸ್ಕಾರ........**

ಆತ:-ನಮಸ್ಕಾರ........ನೋಡಿ....ರಾಯರೇ....

ಈತ:-ಅವರ ಹೆಸರು ಹುಚ್ಚುರಾಯರು ಅಂತ....

ಆತ:-ಅಷ್ಟು ಗೊತ್ತಿರಲಿಲ್ಲ ನನಗೆ! ಕ್ಷಮಿಸಬೇಕು.......ಬರೀ ರಾಯರು ಅಂತಿದ್ವಿ....ನೋಡಿ....ಹುಚ್ಚೂರಾಯರೇ ಈಗಿನ ಪರಿಸ್ಥಿತಿಯಲ್ಲಿ ನಾಟಕದ ಕಂಟ್ರಾಕ್ಟು ಅಂದರೆ, ತಮಗೆ ಗೊತ್ತಿದೆಯೋ, ಏನೋ, ತುಂಬ ಕಷ್ಟದ ಕೆಲಸ. ಅದೂ ಅಲ್ಲದೆ, ನಿಮ್ಮ ನಾಟಕದ ಕಥೆ ಕೇಳಿದ ಮೇಲಂತೂ....

ರಾಯರು:-ಏಕೆ ಆದರ್ಶ ಸಾಧನೆಗಾಗಿ ಅನುವರತವೂ ಅಂಗಲಾಚಿಸುತ್ತಿದ್ದ ಅಂಗನೆಯರಿಬ್ಬರು .. ..

ಆತ:-ಗೊತ್ತಾಯಿತು! ಗೊತ್ತಾಯಿತು! ಓದಿದೆ ನಿಮ್ಮ ಪುಸ್ತಕಾನ.

ರಾಯರು:-ಕೃತಾರ್ಥನಾದೆ..... .. ....

ಈತ:-ರಾಯರೇ ನಮ್ಮ ನಾಗರಾಯರಿದಾರಲ್ಲಾ, ತುಂಬಾ ಅನುಭವಿಗಳು. ಮಹಾಜನಗಳಿಂದ ಹೇಗೆ ರೊಕ್ಕ ತೆಗೆಯಬೇಕೆಂಬುದು ಇವರಿಗೆ ಗೊತ್ತು. ಅವರ ಮಾತನ್ನ ಕೊಂಚ ಲಾಲಿಸಿ........ನಿಮ್ಮ ಮಸಿ ಕುಡಿಕೆಯೊಳಗೇನೇ ಮೂರು ಲೋಕಗಳು ಇವೆ ಅಂತ ಭಾವಿಸಬೇಡಿ...........

ರಾಯರು:-ಹಾಗಂದೆನೆ ನಾನು?...........

ಈತ: ಹಾಗನ್ನಬೇಕೆ? ನೀವು? ನಿಮ್ಮ ನಡತೆಯಿಂದ ನಿಮ್ಮ ಬರವಣಿಗೆಯಿಂದ, ನೀವು ಹಾಗೆ ತಿಳಿದುಕೊಂಡಿದ್ದೀರೀಂತ ನಮಗೆ ಗೊತ್ತಾಗುವುದಿಲ್ಲವೆ?

ರಾಯರು:-ಚೆನ್ನಾಯಿತು....(ಕೆರಳಿ) ನನ್ನನ್ನು ಅವಮಾನಪಡಿಸಬೇಕು ಅಂತ ನೀವು ನನ್ನನ್ನು ಇಲ್ಲಿಗೆ ಕರಿಸಿದ ಹಾಗೆ ಕಾಣುತ್ತದೆ....ನಾನು ಹೊರಡುತ್ತೇನೆ.... ಹಾಗಾದರೆ...........

ಆತ:-(ಕಟುವಾಗಿ ನಗುತ್ತಾ) ರಾಯರೇ....ನಿಮಗೆ ಮಕ್ಕಳೆಷ್ಟು?

ರಾಯರು:-ಆಗಲಿ, ಸ್ವಾಮಿ! ಕುಳಿತುಕೊಳ್ಳುತ್ತೇನೆ....ಕಂಟ್ರಾಕ್ಟರೇ! ಏನೇನಾಗಬೇಕು ಕೇಳಿ....ರಿಹರ್ಸಲ್ ನೋಡಿದಿರಾ...........?

ಆತ:-ನೋಡಿದೆ....ಆದರೆ ಅವನ್ನು ರಿಹರ್ಸಲ್ ಅಂತ ಹೇಳುವ ಹಾಗಿಲ್ಲ....

ರಾಯರು:-ಯಾಕೆ?

ಈತ:-ಅವರು ಹೇಳುತ್ತಾರೆ, ನಮ್ಮ ಕಂಪನಿಯ ನಟರೆಲ್ಲರೂ ತಮ್ಮ ತಮ್ಮ ಪಾರ್ಟು, ತಮ್ಮ ತಮ್ಮ ಮಾತು, ಹಾಡು, ಇವುಗಳ ವಿಷಯದಲ್ಲಿ ತುಂಬಾ ಅಸಮಾಧಾನ ಪಟ್ಟುಕೊಳ್ಳುತ್ತಿದ್ದಾರಂತೆ, ಒಬ್ಬರಿಗೊಬ್ಬರು ತಿದ್ದಿಕೊಳ್ಳುತ್ತಾ ಮನಸ್ಸು ಬಂದಂತೆ ನಾಟಕವನ್ನು ಟೀಕಿಸುತ್ತ ರೇಗಾಡುತ್ತಿದ್ದಾರಂತೆ...........

ರಾಯರು:-ಊ....ಹೂಂ! ನಾನೊಂದು ಸಾರಿ ಬರೆದಿದ್ದನ್ನು ಬ್ರಹ್ಮನಿಂದಲೂ ತಿದ್ದಲು ಸಾಧ್ಯವಿಲ್ಲ....ಆ ಮಾತುಗಳೆಲ್ಲವೂ ಕನ್ನಡಮ್ಮನ ಪಾದಾರಾಧನೆಯಿಂದ ಮಾಡಿ ಬಂದ ವಚನ ಸ್ಫೂರ್ತಿಯ ಹೊಮ್ಮಗಳು?

ಈತ:-ಇರಬಹುದು! ಆದರೆ, ನಿಮಗೋಸ್ಕರ ಬೇರೆ ನಟರನ್ನು ತರಿಸುವುದಕ್ಕಾಗುತ್ತದೆಯೇ ನನಗೆ?........ನಟರಿರುವಷ್ಟು ನಾಲಿಗೆ ಚಾಚಬೇಕು, ನಾಟಕಕರ್ತರು!

ಆತ:-ಅದಕ್ಕೆ ನಾನೊಂದು ಸಲಹೆ ಕೊಡುತ್ತೇನೆ....ನೀವು ಈಗ ಬರೆದದ್ದೆಲ್ಲಾ ಹಾಗೆಯೇ ಇರಲಿ! ನಾಟಕಾನ ಅಚ್ಚುಗಿಚ್ಚು ಮಾಡುವಾಗ ಬೇಕಾದೀತು!....ಆದರೆ ರಂಗಸ್ಥಳದ ಮೇಲೆ ತರುವಾಗ ನಟರ ಬಾಯಿಂದ ಆಡಿಸುವಾಗ ಬಂದ ಹಾಗೆ ಬರಲಿ....ಮಹಾಜನಗಳಿಗೆ ರಚಿಸುವ ರೀತಿಯಲ್ಲಿ ಹೇಗೆ ಮಾತುಗಳ ಜೋಡಣೆಯಾಗ ಬೇಕು ಅಂತ ಅವರಿಗೆ ಗೊತ್ತಿ ಹೊರತು........

ಈತ:-ಒಂದು ದಿನವೂ ಕೂಡ ಇದುವರೆಗೆ ನಾಟಕ ನೋಡುವುದಕ್ಕೆ ಬಿಟ್ಟಿ ಟಿಕೀಟು ಸಿಗದ ತಮಗೆ ಗೊತ್ತಿರಲಿಕ್ಕಿಲ್ಲ........ಹುಚ್ಚೂರಾಯರೇ....ರೇಗ.... ಬೇಡಿ....

ರಾಯರು:-ಆದರೂ ಕೂಡ....

ಈತ:-ಆದರೂನೂ ಇಲ್ಲ....ಕೂಡಾನೂ ಇಲ್ಲ....ನೀವು ನಾಟಕ ಬರೆದಿದ್ದು ನಿಮ್ಮ ಸಂಸಾರದ ತಾಪತ್ರಯ ತೀರಿಸಿಕೊಳ್ಳುವುದಕ್ಕಾಗಿ....ಜ್ಞಾಪಕವಿರಲಿ....

ರಾಯರು:-ಅಲ್ಲ ...ಸರಸ್ವತೀದೇವಿಯ ಬಲವಂತವನ್ನು ತಡೆಯಲಾರದೆ....

ಆತ:-ಹುಚ್ಚುರಾಯರೇ !........ಇರಬಹುದು....ಇಲ್ಲ, ಅನ್ನುವುದಿಲ್ಲ, ನಾನು ! ಆದರೂ ಕಂಪೆನಿಯಲ್ಲಿರುವ ಇಬ್ಬರು ರಾಜಾಪಾರ್ಟಿಗೂ............

ಈತ:-ಸರಿಸಮವಾದ ಸ್ಥಾನಮಾನಗಳು ನಿಮ್ಮ ನಾಟಕದಲ್ಲಿ ದೊರೆ ತ್ತಿಲ್ಲ....ಅಲ್ಲದೆ, ಬೇಬೀಮೈತ್ರೇಯೀ ಎಂಬ ನಮ್ಮ "ಮಗುಗಳ ಮಾಣಿಕ್ಯ" ಗಳಿಗೆ........

ಆತ:-ನಿಮ್ಮ ನಾಟಕದಲ್ಲಿ ಇಣಿಕಿ ನೋಡುವುದಕ್ಕೂ ಅವಕಾಶವಿಲ್ಲವಲ್ಲಾ....

ಈತ:-ಆ ಸಣ್ಣ ಮಗು ಒಂದು "ಕಣ್ಣಿಲ್ಲದ ಕಪೋತಿ" ಅಂಬೋ ಹಾಡು ಹೇಳಿದರೆ, ಮಹಾಜನಗಳೆಸೆಯುವ ಬಿಡುಕಾಸುಗಳೇ ಸಾಕು, ಅಂದಿನ ಬಣ್ಣದ ಖರ್ಚಿಗೆ........

ಆತ: ಆ ಮೇಲೆ, ಅದನ್ನ ಮರೆತೇಬಿಟ್ಟಿರಲ್ಲಾ ಪ್ರೊಪ್ರೈಟರೇ, ಆ ಜಿಂಕೆ ಸಮಾಚಾರ........

ಈತ:-ಹೂಂ, ಒಂದು ಋಷ್ಯಾಶ್ರಮವನ್ನೋ ಅಥವಾ ಜೂಗಾರ್ಡನನ್ನೋ ಅಥವಾ ಬೇಟೆ ಸೀನೋ. ಅಥವಾ ಮಾರೀಚನನ್ನೋ ಸೇರಿಸಲೇ ಬೇಕು, ನೀವು, ನಿಮ್ಮ ನಾಟಕದಲ್ಲಿ........ಹೊಸಾಹೊಸ ಜಿಂಕೆ ತಂದಿದೇವೆ.

ಆತ:-ಒಂಟೆ ?

ಈತ:-ಒಂಟೇದು ಏನೂ ಭಯವಿಲ್ಲ ಅದನ್ನ ಆಗಲೇ ನಾಟಕಕ್ಕೆ ಸೇರಿಸಿಕೊಂ ಡಿದೇವೆ........

ರಾಯರು:-ಏನು ? ಸ್ವಾಮಿ ! ನನ್ನ ನಾಟಕನಲ್ಲಿ ಒಂಟೆ ಸೇರಿಸಿದ್ದೀರಾ....

ಆತ:-ಕಾಸುಬರಬೇಕಾದರೆ, ಒಂಟೇನೂ ಸೇರಿಸಬೇಕಾಗುತ್ತೆ....

ಈತ:-ನಾನೂ ಸೇರಬೇಕಾಗುತ್ತೆ !

ರಾಯರು:-ಹಾಗಾದರೆ, ನಾನು ಮಾತ್ರ ಒಲ್ಲೆ ಅಂತ ಹೊರಟು ಬಿಡಬೇಕಾ

ಗುತ್ತದೆ....ಅಷ್ಟೆ. ಚಲನ ಚಿತ್ರದವರು ಮಾಡುವ ಚಿತ್ರಹಿಂಸೇನೆಲ್ಲಾ ನೀವು ನಾಟಕಕ್ಕೂ ಮಾಡಿದರೆ.......

ಆತ:-ಆಗ ನಿಮ್ಮ ನಾಟಕದ ಹೆಸರು ಸಾರ್ಥಕವಾಗುತ್ತದೆ.

ಈತ:-ಹುಚ್ಚುರಾಯರೇ ನೀವು ಹಾಕಿಕೊಂಡಿರುವ ಅಂಗಿಯ ಜೇಬು ಹರಿದು ಹೋಗಿದೆಯಲ್ಲಾ.

ರಾಯರು:-ಗೊತ್ತಾಯಿತು....ಕಂಟ್ರಾಕ್ಟರೇ! ನಾನುಬಡವ....ಒಂಟೇನೂ ತರಬಹುದು........ಜಿಂಕೇನೂ ಬರಲಿ.......

ಈತ:-ಹಾಗೆ ರೇಗಬೇಡಿ ರಾಯರೇ! ಕಾಸು ಜಾಸ್ತಿ ಬಂದಷ್ಟೂ ನಿಮಗೂ ಲಾಭ ತಾನೆ?.......ಕಂಟ್ರಾಕ್ಟರು ಕೊಡುವ ೫೦೦ ರೂಪಾಯಿಯಲ್ಲಿ ನಮ್ಮ ಖರ್ಚು ೩೦೦ ರೂಪಾಯಿ ಹೋಗ್ತಾ ೨೦೦ ರೂಪಾಯಿಗೆ ೨|| ಆಣೆಯಂತೆ.......

ಆತ:-ಹುಚ್ಚುರಾಯರೇ.......ನಿಮ್ಮ ಅಂಗಿಯ ಗುಂಡಿಗಳೆಲ್ಲ ಕಿತ್ತುಹೋಗಿವೆ.......ಇನ್ನೊಂದಂಗಿ ಹೊಲಿಸಿಕೊಳ್ಳಿ ದೀಪಾವಳಿ ಒಳಗೆ.......ನಾಟಕ ಕರ್ತರನ್ನ ನಾವು ನೋಡಲೇಬೇಕು ಎಂದು ಮಹಾಜನಗಳು ಕೂಗಿಕೊಳ್ಳುತ್ತಾರೆ....... ಆಗ ನಿಮ್ಮನ್ನ ರಂಗಸ್ಥಳದಲ್ಲಿ ನಿಲ್ಲಿಸಿ ಹಾರಹಾಕುತ್ತೇವೆ.

ಈತ:-ಯಾರೂ ಕೂಗದೆ ಇದ್ದರೆ?.......

ಆತ:-ನಮ್ಮ ಕಡೆಯವರನ್ನ ಬಿಟ್ಟು ಕೂಗಿಸುತ್ತೇನೆ....ಏನು, ಹುಚ್ಚುರಾಯರೇ ಆಗಬಹುದೋ ?

ರಾಯರು:-ಆಗ ಬಹುದು ಸ್ವಾಮಿ....ನನ್ನ ಜನ್ಮ ಸಾರ್ಥಕವಾಗುತ್ತೆ.......

ಈತ:-ಹಾಗಾದರೆ ಇನ್ನೊಂದು ಬದಲಾವಣೆಯೂ ಆಗಬೇಕು.

ಆತ:-ನಿಮ್ಮ ನಾಟಕದ ಹೆಸರು ಬದಲಾಯಿಸಿದ ಹಾಗೆ ನಿಮ್ಮ ಹೆಸರನ್ನೂ ಬದಲಾಯಿಸಿದರೆ ಆ ಸಮಾರಂಭಕ್ಕೆ ಹೆಚ್ಚು ಕಳೆಕಟ್ಟುತ್ತೆ.

ಈತ:-'ಉನ್ಮತ್‌ಜಿ' ಅಂತ ಹೆಸರಿಟ್ಟರೆ, ಚೆನ್ನ.......

ಆತ:-ಹೌದು, ನಿಜ.

ರಾಯರು:-ನಾನೊಪ್ಪುವುದಿಲ್ಲ.

ಈತ:-ಒಪ್ಪಿದರೆ. ರೂಪಾಯಿಗೆ ೩ ಆಣೆ ಕೊಡುತ್ತೇನೆ.......

ಆತ:-ಹುಚ್ಚೂರಾಯರೇ....

ಈತ:-'ಉನ್ಮತ್‌ಜಿ'ಯವರು ಬರೆದ 'ಚಲನ ಚಿತ್ರ' ಎಂಬ ನಾಟಕ ಅಂದರೆ ಎಷ್ಟು ಮನಮೋಹವಾಗಿರುತ್ತದೆ !

ಆತ:-ಒಪ್ಪಿಕೊಂಡು ಬಿಡಿರಾಯರೇಉಟ್ಟುಕೊಳ್ಳುವುದಕ್ಕೊಂದುಪಂಚೆಆಯ್ತು.

ರಾಯರು:-'ಉನ್ಮತ್‌ಜಿ'.......'ಉನ್ಮತ್‌ಜಿ'.......ಹೊಸ ಪಂಚೆ....ಆಗಬಹುದು.......

ಆತ:-(ಬೆನ್ನನ್ನು ತಟ್ಟುತ್ತಾ) ನಾಟಕ ಕರ್ತರು ಅಂದರೆ ನೀವು.......

—ನಾ ಕ.

'ಸಕಲಸ್ತಾನ್'

ನೋಡಿ: ಹಿಂದೂ ದೇಶದಲ್ಲಿ ರಾಜಕೀಯ ಆಂದೋಳನವು ವಿಪರೀತಕ್ಕಿಟ್ಟು ಕೊಂಡಿದೆ. ನೀವು ನೀವು ಒಂದಾದರೆ ನಿಮ್ಮದೇ ರಾಜ್ಯವೆಂದು ಆಳರಸರು ಧೈರ್ಯವಾಗಿ ಹೇಳುತ್ತಿದ್ದಾರೆ. ರಾಜ್ಯ ನಮ್ಮದಾದರೆ ನಾವುಗಳೆಲ್ಲರೂ ಒಂದೇ ಎಂದು ಜನರಾಡುತ್ತಿದ್ದಾರೆ. ಹೆಣ್ಣು ಕೊಟ್ಟ ಹೊರ್ತು ಹುಚ್ಚು ಬಿಡುವುದಿಲ್ಲ ಎಂಬಂತಾಗಿದೆ ಈಗಿನ ಪರಿಸ್ಥಿತಿ.

ಈ ಹುಚ್ಚು ಬಿಡಿಸಲೋಸುಗ ಹಲವಾರು ಮಹನೀಯರು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಪಾಕಿಸ್ತಾನಕ್ಕೆ ಒಪ್ಪಿದರೆ ನಾವೆಲ್ಲರೂ ಒಟ್ಟಿಗೆ ಸ್ವರಾಜ್ಯ ಸಾಧಿಸೋಣ ಎಂದು ಒಂದು ಪಂಗಡದವರು. ಪಾಕಿಸ್ತಾನಕ್ಕೆ ಒಪ್ಪಿದಮೇಲೆ ಒಟ್ಟಿಗೆ ಸ್ವರಾಜ್ಯವೆಲ್ಲಿ ಬಂತು. ಎರಡು ಸ್ವರಾಜ್ಯವಾಯಿತಲ್ಲ ಎಂದು ಒಂದು ಪಂಗಡ. ನಿಮ್ಮ ನಿಮ್ಮದು ಹಾಗಿರಲಿ ನಮಗಾಗಿ ಪಠಾನಸ್ತಾನ, ಪಾರ್ಶಿಸ್ತಾನ, ದ್ರಾವಿಡಸ್ತಾನ, ಇತ್ಯಾದಿಗಳನ್ನು ಸರಿಪಡಿಸಿ ಕೊಡಿ ಎಂದು ವಿವಿಧ ಪಂಗಡದವರು. ಹೀಗಾಗಿ ಹುಚ್ಚು ಬಿಡಿಸುವುದು ಅಷ್ಟೇನು ಸುಲಭವಾಗಿಲ್ಲ.

ಈ ಹುಚ್ಚು ಬಿಡಿಸಲು ನನ್ನದೊಂದು ಉಪಾಯ. ಶಾಸ್ತ್ರೀಕವಾಗಿ ಯೋಚನೆ ಮಾಡಿದರೆ ಇದೇ ನ್ಯಾಯವಾಗಿ ನಿಮಗೂ ತೋರುವುದು. ಸಾವಧಾನವಾಗಿ ಓದಿ. ನಂತರ ತಡವರಿಸಿಕೊಳ್ಳಿ.

ವಿವಿಧ ಪಂಗಡದವರೂ ಪರಸ್ಪರವಾಗಿ ಒಪ್ಪದಿರಲು ಮಹತ್ತರವಾದ ಆಜನ್ಮ ಕಾರಣ ಯಾವುದಾದರೂ ಒಂದಿರಬೇಕು. ಆಹಾರವೇ ಆ ಕಾರಣವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಅಮ್ಮಾ ಎನ್ನುವ ಮೊದಲೇ ಆಕಳ ಹಾಲನ್ನು ಕುಡಿಯಲು ಆರಂಭಿಸುತ್ತೇವೆ. ತಾತಾ ಎನ್ನುವ ಮೊದಲೇ ತಾಯ ಹಾಲನ್ನು ಚಪ್ಪರಿಸುತ್ತೇವೆ. 'ಆಟ' 'ಓಟ' ಕಲಿಯುವ ಮೊದಲೇ ಊಟ ಕಲಿಯುತ್ತೇವೆ ಅಂತಾಗಿ ಘನತರವಾದ ಆಜನ್ಮಸಿದ್ಧವಾದ ಗುಣವೆಂದರೆ ಆಹಾರ. ಈ ಆಹಾರವು ಜನರು ಬೆಳೆದ ಹಾಗೆಲ್ಲಾ ಜನಾಂಗಕ್ಕೆ ತಕ್ಕಂತೆ ಮಾರ್ಪಾಡಾಗುತ್ತದೆ. ಹಾಗಾಗಿ ಒಬ್ಬರ ಆಹಾರವನ್ನು ಕಂಡರೆ ಇನ್ನೊಬ್ಬರಿಗೆ ನಗುಪಾಟಲು ಆಗುತ್ತದೆ. ಇಡಲಿ ಸಾಂಬರಿನ ಕಣಿವೆ ಕೆಳಗಿನವನಿಗೆ ಮಲಶೀಮೆಯ ಮಿಡಿಗಾಯಿ ಅನಾರ್ಯ ಆಹಾರದಂತೆ ತೋರುತ್ತದೆ. ಮೆಣಸಿನ ಕಾಯಿ ಚಟ್ಣಿಯ ಆಂಧ್ರನು ತಿಳಿಸಾರಿನ ಮೈಸೂರಿನವನನ್ನು ಹೀಯಾಳಿಸುತ್ತಾನೆ. ಕುರಿಯನ್ನು ತಿನ್ನುವ ಬಿರಿಯಾನಿ ಮೋದಕನು ಬ್ರಾಹ್ಮಣನನ್ನು ಕುರಿಯೆಂದೇ ಕರೆಯುತ್ತಾನೆ. ಹಂದಿ ತಿನ್ನುವ ಆಂಗ್ಲೇಯನನ್ನು

ಹಂದಿಯೆಂದೇ ಹೇಳುತ್ತಾನೆ. ದನವೇ ಧನವೆಂದೆನ್ನುವ ದ್ರಾವಿಡನು, ಮಹಮ್ಮದೀಯನು ದನ ತಿನ್ನುವನೆಂದು ಹೀಯಾಳಿಸುತ್ತಾನೆ. ರಸಗುಲ್ಲಾದಲ್ಲೇ ರಮಿಸುವ ವಂಗೀಯನು ಮಿಕ್ಕಿತರರ ಜೀವನವೆಲ್ಲಾ ಕಹಿಯೆಂದು ಹಾಸ್ಯ ಮಾಡುತ್ತಾನೆ. ರೊಟ್ಟಿ ಮೆಲ್ಲುವ ಪಠಾಣನನ್ನು ಭ್ರೂಣ ಹತ್ಯಾಕಾರಿಯೆಂದು ಬ್ರಾಹ್ಮಣನು ಪರಿಹಾಸ್ಯ ಮಾಡುತ್ತಾನೆ. ಪಶ್ಚಿಮ ತೀರದ ಮತ್ಸ್ಯ ಬ್ರಾಹ್ಮಣನೂ, ಉತ್ತರ ದೇಶದ ಕುಕ್ಕುಟ ಬ್ರಾಹ್ಮಣನೂ, ಪೂರ್ವತೀರದ ಜೇಳೆಬ್ರಾಹ್ಮಣನೂ, ಕಣ್ಣೆತ್ತಿಯೂ ನೋಡುವುದಿಲ್ಲ. ಈ ವಿಧದ ಜನಾಂಗಗಳ ಪರಸ್ಪರ ಹೀಯಾಳಿಕೆಗೆ ಒಂದೇ ಕಾರಣ. ಬೇರೆ ಬೇರೆ ಬೆಳೆದು ಬಂದ ಆಹಾರ ಪದ್ಧತಿ.

ಈ ಜನಾಂಗಗಳೆಲ್ಲಾ ಒಂದಾಗಬೇಕಾಕಾದರೆ ಒಂದೇ ಉಪಾಯ. ಎಲ್ಲರೂ ಒಂದೇ ತೆರನಾದ ಆಹಾರವನ್ನು ಅಭ್ಯಾಸ ಮಾಡಬೇಕು. ಆಳರಸರು ಈಗಿಂದೀಚೆಗೆ ತುಟಿಪಿಟಕ್ಕೆನ್ನುವುದಕ್ಕೂ ಕಾನೂನುಗಳನ್ನು ಗುಂಡಿನ ಬಾಯಿಂದಲೇ ಜಾರಿಗೆ ತರುತ್ತಿದ್ದಾರೆ. ಇದೊಂದು ಸರ್ವಭಕ್ಷಕ ಕಾನೂನನ್ನು ಜಾರಿಗೆ ತಂದು, ಸಕಲ ಹಿಂದೂಮತಸ್ಥರೂ ಒಂದೇ ತೆರನಾದ ಆಹಾರವನ್ನು ತಿನ್ನಲೇಬೇಕೆಂದು ಅಪ್ಪಣೆ ಮಾಡಿದರೆ ಅಂದೇ ಸ್ವರಾಜ್ಯವು ದೊರಕಿದಂತಾಗುವುದು. ಅದರ ಹಿನ್ನೆಲೆಯಲ್ಲೇ ದೇಶೋನ್ನತಿ, ಶತ್ರು ನಿರ್ನಾಮ, ಶಾಂತಿ ತುಷ್ಟಿ ಇತ್ಯಾದಿಗಳೆಲ್ಲಾ 'ರಸ್ತು' ವಾಗುತ್ತದೆ.

[ಲೇಖಕನು ಸರ್ವಭಕ್ಷಣ ಮಾಡಿದ ಮೇಲೆಯೇ ಈ ಹಗಲು ಕನಸನ್ನು ಕಂಡಿರಬೇಕೆಂದೂ, ಆತನ ಉದರಗತವಾದ ಕುಕ್ಕುಟ, ಕೋಡಬಳೆಗಳ ಉದ್ಗಾರವೇ ಈ ಲೇಖನವೆಂದೂ ನಮಗೆ ಸಂದೇಹ ಉಂಟಾಗುತ್ತಿದೆ ಸಂ.]



''ನಾನು ಕೆಲಸ ಬಿಟ್ಟು ಹೋಕ್ತೀನಿ ಸ್ವಾಮಿ. ನನ್ನಲ್ಲಿ ನಿಮ್ಗೆ ನಂಬ್ಕೆ ಇಲ್ಲ.''
"ಅದೇಕೊ ಹಾಗೆ ಹೇಳುತ್ತಿ ಮನೆ ಬೀಗದಕೈಗಳೆಲ್ಲಾ ನಿನ್ನ ಕೈಯ್ಯಲ್ಲೆ ಕೊಟ್ಟಿಟ್ಟಿಲ್ವೇನೊ"
''ಹೌದು ಬುದ್ಧಿ. ಆದ್ರೆ ಬೀಗದ ಕೈಗಳೊಂದೂ ಬೀಗಗಳಿಗೆ ಸರಿಯಾಗಿಲ್ಲ.''

ತೃಣಾನಂದ

•

"ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆಯೇ ?" ಎಂದು ನಮ್ಮ ನಾಡಿನ ಜನರು ಒಬ್ಬರನ್ನೊಬ್ಬರು ವಿಚಾರಿಸುತ್ತಾರೆ. ಮೇಯಿಸುತ್ತಾನೆ; ನಾವು ಧರ್ಮದ ಹಾದಿಯಲ್ಲಿ ನಡೆದು ಕರ್ಮಭ್ರಷ್ಟರಾಗದೆ, ಸದಾ ಭಗವನ್ನಾಮದ ನೆರಳಿನಲ್ಲೇ ಬದುಕನ್ನು ನೇರ್ಪಡಿಸಿದರೆ, ದೇವರು ಹುಲ್ಲು ಮೇಯಿಸುತ್ತಾನೆ; "ನಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ" ಎಂದು ಶ್ರೀ ಕೃಷ್ಣಪರಮಾತ್ಮನು ಮಾನವ ವರ್ಗಕ್ಕೆ ಅಭಯಕೊಟ್ಟಿಲ್ಲವೆ ? ಮತ್ತೆ ಈ ವಿಷಯದಲ್ಲಿ ಸಂದೇಹವೇಕೆ ?

ದನಕರುಗಳು ಹುಲ್ಲು ಮೇಯುವುದನ್ನು ಕಂಡು ಮನುಷ್ಯ ಅನೇಕ ಶತಕೋಟಿ ಸಾವಿರ ವರ್ಷಗಳಿಂದಲೂ ತನ್ನ ದುರವಸ್ಥೆಗಾಗಿ ಮರುಗಿದಾನೆ. ಗೇಣುದ್ದದ ಹೊಟ್ಟೆಗಾಗಿ ತಾನು ಕಂದ ಮೂಲಗಳನ್ನು ಸಂಪಾದಿಸಬೇಕು; ದವಸಧಾನ್ಯಗಳನ್ನು ಬೆಳೆಸಬೇಕು; ಅಂಡಾಂಡಗಳನ್ನೂ ರಕ್ತಮಾಂಸಗಳನ್ನೂ ಆಳವಡಿಸಿಕೊಳ್ಳಬೇಕು; ಬಿಲ್ಲುಬಾಣಗಳನ್ನು ಧರಿಸಿ ಬೇಟೆಯಾಡಬೇಕು; ನೇಗಿಲುಗಳಿಂದ ಉತ್ತು ಬಿತ್ತಬೇಕು; ಕುಕ್ಕರಾದಿಗಳಿಂದ ಕುಕ್ಕುಟಾದಿಗಳನ್ನು ಕುದಿಸಿ,ಮುಸಲಾದಿಗಳಿಂದ ಮಸಾಲಾಗಳನ್ನು......ಇತ್ಯಾದಿ ಇತ್ಯಾದಿ ಕಷ್ಟಪರಂಪರೆಗಳಿಗೆ ಮಾನವನು ಸಿಕ್ಕಿರುವನು. ತೃಣಾನಂದರಾದ ತುರುಕರುಗಳು ಹಾಯಾಗಿ ಹೆತ್ತು ಮೂರು ವಾಕಿಂಗ್ ಹೋಗಿ, ಅದೇ ಸಮಯದಲ್ಲಿ ಮುಸುಡಿಯನ್ನು ನೀಡಿ ನಾಲಿಗೆ ನುಲುಚಿ ಹಸುರಾದ ಆಹಾರವನ್ನು ಭರ್ತಿಮಾಡಿ ಬಂದುಬಿಡುತ್ತವೆ. ಅನಂತರ, ಅವುಗಳಿಗೆ ಮರದಡಿಯ ದಿಣ್ಣೆಯೇ ಈಸಿಚೆಯರು ! ಅಲ್ಲಿ ಮಲಗಿ ಹಗಲುಗನಸು ಗಾಣುತ್ತಾ ತಿಂದದ್ದನ್ನ ತೇಗಿಸಿ ಮೆಲುಕುಹಾಕುತ್ತಾ ಅರೆಸಮಾಧಿಯಲ್ಲಿರುತ್ತವೆ. ಆ ನಿರ್ಲಿಪ್ತ ಶಾಂತಿ ಎಲ್ಲಿ? ಈ ಅಡಿಗೆ ಮನೆಯ ಗಡಿಬಿಡಿ ಎಲ್ಲಿ?........ ಆದ್ದರಿಂದಲೇ ಮನುಷ್ಯನು ಆಕಾಶಕ್ಕೆ ತಲೆ ಎತ್ತಿ "ದೇವಾ ! ನನ್ನನ್ನು ಹುಟ್ಟಿಸಿದವನು ನೀನು. ಆದರೆ, ಆಹಾರಕ್ಕಾಗಿ ನಾವು ಈಗ ಪಡುವ ಕಷ್ಟಗಳನ್ನು ನೀಗಿಸಿ ನಾವು ಹುಲ್ಲು ತಿನ್ನುವಂತೆ ಮಾಡಲಾರೆಯಾ? ಆ ಬುದ್ಧಿಯನ್ನು ನಮಗೆ ಕೊಡಲಾರೆಯಾ ?" ಎಂದು ಪ್ರಾರ್ಥಿಸುತ್ತಿರುವುದು.

ಆಹಾರಗಳಲ್ಲೆಲ್ಲಾ ತೃಣವೇ ಬಹು ಮುಖ್ಯವಾದದ್ದು. ಅಮೃತ ಸಮವಾದ ಹಾಲು ಹುಲ್ಲಿನಿಂದ ಉತ್ಪತ್ತಿಯಾಗುತ್ತದೆ ಅಂದ ಮೇಲೆ ಹುಲ್ಲಿನ ಶ್ರೇಷ್ಠತೆಯನ್ನು ವಿವರಿಸಬೇಕಾಗಿಯೇ ಇಲ್ಲ. ಆದರೂ, ತೃಣಶಾಸ್ತ್ರದಲ್ಲೂ ಆಹಾರ ವಿಜ್ಞಾ

ನದಲ್ಲೂ ನುರಿತವರಾದ ಹಲವರ ಅಭಿಪ್ರಾಯಗಳನ್ನು ಇಲ್ಲಿ ಉದಹರಿಸುತ್ತೇವೆ. "ಹುಲ್ಲಿನಲ್ಲಿ ರೋಗನಿವಾರಕವಾದ ಏ ವಿಟಮೀನಿಂದ ಹಿಡಿದು ವೀರ್ಯವರ್ಧಕವಾದ ಈ ವಿಟಮೀನಿನವರೆಗೆ ಎಲ್ಲಾ ಸತ್ವಗಳೂ ಇವೆ. ಅಸ್ಥಿಪೋಷಕವಾದ D ಮಾತ್ರ ಅದರಲ್ಲಿಲ್ಲ."

"ಹಣ್ಣು ಹಂಪಲುಗಳಿಗಿಂತ ಹುಲ್ಲಿನಲ್ಲಿ ಏ ಸತ್ವ ೨೩ರಷ್ಟು ಹೆಚ್ಚು ಪ್ರಮಾಣದಲ್ಲಿ ಸಿಗುತ್ತದೆ; ನರಗಳಿಗೆ ಪುಷ್ಟಿಕೊಡುವ ಬಿ (ಒಂದು) ಸತ್ವ ಲರಷ್ಟಿದೆ; ದೇಹಪುಷ್ಟಿಗೆ ಬೇಕಾದ ಬಿ (ಎರಡು) ೨೧ರಷ್ಟು ಹೆಚ್ಚು ಪ್ರಮಾಣದಲ್ಲದೆ; ಕಜ್ಜಿ ತುರಿ ಮುಂತಾದ ರೋಗಗಳನ್ನು ನಿರೋಧಿಸುವ ಸೀ ವಿಟಮೀನುಗಳರಷ್ಟು ಹೆಚ್ಚು ಸಿಗುತ್ತದೆ"

"೩೪೦ ಪೌಂಡು ತೂಕದ ಹಣ್ಣು ಹಂಪಲುಗಳಿಗಿಂತ ೧೨ ಪೌಂಡು ತೂಕದ ಹುಲ್ಲಿನಲ್ಲಿ ಹೆಚ್ಚು ವಿಟಮೀನುಗಳಿವೆ"

ಇವೆಲ್ಲ ಕಾಕಮ್ಮನ ಕಥೆಗಳಲ್ಲ. ವಿಜ್ಞಾನ. ಕೊರವಂಜಿಗಳು ಹೇಳಿರುವ ಕಣಿಗಳು. ಆದ್ದರಿಂದ, ಹುಲ್ಲು ಮೇಯುವುದೆಂದರೆ ವಿಟಮೀನುಗಳನ್ನು ಮೆಲ್ಲುವುದು- ಎಂಬುದೇ ಅರ್ಥ. "ಯುದ್ಧಕಾಲೇ ಶಾಸ್ತ್ರಾಭ್ಯಾಸ" ಎಂಬ ಜಾಣ್ನುಡಿಯಂತೆ, ಅನೇಕ ಶಾಸ್ತ್ರಗಳು ಬಹುಮಟ್ಟಿಗೆ ಯುದ್ಧಕಾಲದಲ್ಲೇ ಅಭಿವೃದ್ಧಿ ಹೊಂದುತ್ತವೆ. ಆಹಾರ ಶಾಸ್ತ್ರವೂ ಕೂಡ ಅಂತೆಯೇ. ಅಮೇರಿಕಾದ ವೈಜ್ಞಾನಿಕರು ಒಂದು ರೀತಿಯ ಹುಲ್ಲುಪುಡಿಯನ್ನೇ ತಯಾರಿಸಿದಾರೆ. ಅದನ್ನುಪಯೋಗಿಸಿ ಅಲ್ಲಿ ದೋಸೆ, ಇಡ್ಲಿ, ಗಂಜಿ, ಕಾಯಿಕಡುಬು ಮುಂತಾದ ಪದಾರ್ಥಗಳನ್ನು ರುಚಿರುಚಿಯಾಗಿ ಮಾಡುತ್ತಿರುವರಂತೆ.

ಹುಟ್ಟಿಸಿದ ದೇವರು, ಕೊನೆಗೂ, ಹುಲ್ಲುಪುಡಿ ತಿನ್ನಿಸಿದಿನಲ್ಲಾ, ಎಂಬುದೇ ಅವರ ತೃಪ್ತಿ. ಆದರೆ, ನಾಗರಿಕತೆ ಇನ್ನೂ ಕೊಂಚ ಮುಂದುವರಿದು, ನಾವು ವಾಕಿಂಗ್ ಹೋಗುವಾಗ ತಲೆ ಬಗ್ಗಿಸಿ ಸಾಕ್ಷಾತ್ ಹುಲ್ಲನ್ನೇ ತಿಂಬುವ ಹಾಗೆ ದೇವರು ಅನುಗ್ರಹಿಸಲಿ.

ಹೆಬ್ಬಿ ಗುಬ್ಬಾಲೆಯಲ್ಲಿ ಒಂದು ಕಾಸಿನ ದೋಸೆಗಳಿವೆಯಂತೆ—ನಮ್ಮೂರಿನಲ್ಲಿಯೂ ಇವೆ. ಆದರೆ ನಾವೇನೂ ಜಂಭ ಕೊಚ್ಚಿಕೊಳ್ಳುವಂತಿಲ್ಲ. ಏಕೆಂದರೆ ಆ ದೋಸೆಗೇ ಅರ್ಧಾಣೆ ಕೊಡುತ್ತೇವೆ.

* * * *

ಹೊಸ ಸೀರೆಗಳು ನಮ್ಮ ಹೆಂಗಸರಿಗೆ ಸ್ಫೂರ್ತಿಯನ್ನು ಕೊಡುತ್ತದೆ ಎಂದು ಮಾನಸಿಕ ಶಾಸ್ತ್ರಜ್ಞರ ಅಭಿಪ್ರಾಯ.

—ಹೌದು. ನಾವು ನೋಡಿದ್ದೇವೆ. ಹೊಸ ಸೀರೆ ಉಟ್ಟಾಗ ಬಂದ ಸ್ಫೂರ್ತಿಯಲ್ಲಿ ತಿರುಗಿ ಹೋಗಿ ಇನ್ನೊಂದು ಹೊಸ ಸೀರೆ ಕೊಂಡುಕೊಂಡು ಬರುತ್ತಾರೆ.

ಪೂರ್ವದಲ್ಲಿ ಪೇಪರ್ ಇದ್ದಿದ್ದರೆ

[ರಾಮಾಯಣ ಹೀಗೆ ಪ್ರಕಟವಾಗುತ್ತಿತ್ತು!]

ಯುದ್ಧಾರಂಭವೇ ?

ಲಂಕಾದಹನ

ಅಂತರಾಷ್ಟ್ರೀಯ ಒಪ್ಪಂದವನ್ನು ಮುರಿದುದೇ ಕಾರಣ.

(ಸ್ವಂತ ರಿಜಿಸ್ಟರ್ಡ್ ಬಾತ್ಮೀದಾರರಿಂದ) —ಕಿಷ್ಕಿಂಧೆ—

"ರಾಯಭಾರಿ ಆಂಜನೇಯನನ್ನು ಅಂತರ್ರಾಷ್ಟ್ರೀಯ ಒಪ್ಪಂದಕ್ಕೆ ವಿರುದ್ಧವಾಗಿ ತುಚ್ಛೀಕರಿಸಿದ ಕಾರಣ ದಾನವ ರಾಜಧಾನಿಯಾದ ಲಂಕೆಗೆ ಆತ್ಮಸಂರಕ್ಷಣೆಗೋಸ್ಕರ ಅವನು ಬೆಂಕಿ ಇಡಬೇಕಾಯಿತು.'' ಎಂಬ ಅಂಶವನ್ನು ಸರಕಾರದವರು ಈ ಮಧ್ಯಾಹ್ನ ಹೊರಡಿಸಿದ ವಿಶೇಷ ಪ್ರಕಟನೆಯೊಂದು ತಿಳಿಸುತ್ತದೆ.

ಜವಾಬ್ದಾರಿಯುತವಾದ ಕಡೆಗಳಲ್ಲಿ ವಿಚಾರಿಸಿದ್ದಲ್ಲಿ, ಇದು ಬಹು ಮುಖ್ಯವಾದ ಸಮಾಚಾರವೆಂದೂ, ವಿವರಣೆಗಳು ಬರುವವರೆಗೂ ಏನೊಂದು ಹೇಳಲೂ ಸಾಧ್ಯವಿಲ್ಲವೆಂದೂ, ತಿಳಿಯುತ್ತದೆ.

ಅಧಿಕಾರಿ ಆವರಣಗಳಲ್ಲಿ ಇದರ ಪರಿಣಾಮವನ್ನೀಗಲೇ ಊಹಿಸಲು ಸಾಧ್ಯವಿಲ್ಲವೆಂದೂ, ಆದರೆ ಯುದ್ಧಾರಂಭವಾಗುವ ಸಂಭವವಿದೆಯೆಂದೂ ಅಭಿಪ್ರಾಯವಿರುವುದಾಗಿ ಖಚಿತವಾಗಿ ತಿಳಿದುಬರುತ್ತದೆ.

(ದಕ್ಷಿಣಾಪಥದಲ್ಲಿ ಪ್ರವಾಸಕ್ಕೋಸ್ಕರ ದಯಮಾಡಿಸಿರುವ ಅಯೋಧ್ಯೆಯ ರಾಜಕುಮಾರರೂ ಭಾವೀ ಮಹಾರಾಜರೂ ನಮ್ಮ ಮಹಾರಾಜ ಸುಗ್ರೀವ ಪ್ರಭುಗಳ ಆಪ್ತ ಮಿತ್ರರೂ ಆದ ರಾಮಚಂದ್ರಪ್ರಭುಗಳ ಧರ್ಮ ಪತ್ನಿಯವರನ್ನು ರಾವಣನು ಅಪಹರಿಸಿದ್ದು ಸರ್ವರಿಗೂ ತಿಳಿದ ಅಂಶವೇ ಆಗಿದೆ. ಈ ಕಾರಣದಿಂದಲೂ ಮತ್ತು ಮಿತ್ರರಾಷ್ಟ್ರವಾದ ಇತರ ದೇಶದವರು ರಾವಣನ ಮೇಲೆ ಸಹಾಯವನ್ನು ಪ್ರಾರ್ಥಿಸಿದುದರ ಫಲವಾಗಿಯೂ, ಆಂಜನೇಯನನ್ನು ರಾಯಭಾರಿಯಾಗಿ ಕಳುಹಿಸಿದ್ದು ಆಯಿತು. ಈ ರಾಯಭಾರದ ಕಾಲದಲ್ಲಿಯೇ ಮೇಲೆ ಹೇಳಿದ ಸಂಗತಿ ನಡೆಯಿತೆಂದು ಸುಲಭವಾಗಿ ಊಹಿಸಬಹುದು. ಸಂ)

ಸುಡ ಸುಡ ಸುದ್ದಿ

(ಸ್ವ. ರಿ. ಬಾ.) ಕಿಷ್ಕಿಂಧೆ ತಾ|| ?

ರಾಜಕುಮಾರ ಅಕ್ಷಯ ಕುಮಾರನು ಲಂಕೆಯ ಅಶೋಕವನದಲ್ಲಾದ ಒಂದು ಆಕಸ್ಮಿಕದ ಪರಿಣಾಮವಾಗಿ ಮೃತನಾದನೆಂದು ಲಂಕೆಯ ಆಕಾಶವಾಣಿ ತಿಳಿಸುತ್ತದೆ. ಈ ಸುದ್ದಿಗೆ ಬೇರೆ ಯಾವ ಕಡೆಯಲ್ಲೂ ಸಮರ್ಥನೆ ದೊರೆತಿಲ್ಲ.

[ಸೂಚನೆ:— ಈ ವಿಚಾರವು ಬಹು ಮುಖ್ಯವಾದುದರಿಂದ ಇನ್ನು ಮೇಲೆ ನಮ್ಮ ವಾಚಕ ವೃಂದಕ್ಕೆ ಆದಷ್ಟು ಬೇಗ ಸುದ್ದಿಗಳನ್ನೊದಗಿಸುವುದಕ್ಕೋಸ್ಕರ ನಾವು ತಿಳಿದ ವಾರ್ತಾ ಸಂಸ್ಥೆಯೊಂದಿಗೆ ಏರ್ಪಾಡು ಮಾಡಿದ್ದೇವೆ. ವಾಚಕರ ಕುತೂಹಲವನ್ನು ತೃಪ್ತಿಗೊಳಿಸುವುದೇ ನಮ್ಮ ಮುಖ್ಯ ಗುರಿ. ಸಂ] —ಬೆ. ಚಂ.

ಬೆಲ್ಲದ್ಕಾಫಿ (ಒಂದು ಚಿತ್ರ)

ಅವತ್ತು ಪ್ರಭು ಅವನ ಮನೆಗೆ ಕಾಫಿಗೆ ಕರೆದಿದ್ದ. ನಮ್ಮ ಮನೆಯಲ್ಲಿ ಸಕ್ಕರೆಯ ಅಭಾವದ ನೆವದಿಂದ ಕಾಫಿಗೆ ಸೊನ್ನೆಬಿದ್ದಿತ್ತು. ಇದುಕಾರಣ ಗೆಳೆಯನ ಆಹ್ವಾನಕ್ಕೆ ವಿಶೇಷ ಮನ್ನಣೆಕೊಟ್ಟು ಅವನ ಮನೆಗೆ ಹೋದೆ: ನೆಟ್ಟಗೆ 'ರೂಮಿ'ನೊಳಕ್ಕೆ ನುಗ್ಗಿ, ಕುರ್ಚಿಯೊಂದರಲ್ಲಿ ಕುಳಿತು ಯಾವುದೋ ಪುಸ್ತಕವನ್ನು ತಿರುವಿಹಾಕುತ್ತಿದ್ದೆ. ಆಗ ತಾನೇ ಪ್ರಭು ನಿದ್ದೆಯಿಂದ ಎದ್ದಿದ್ದಂತೆ ತೋರಿತು-ಎಲ್ಲೋ ಮುಖ ತೊಳೆಯುವುದಕ್ಕೆ ಹೋಗಿರಬಹುದೆಂದು ಊಹಿಸಿದೆ ; ನನ್ನ ಊಹೆ ಸರಿಯಾಗಿತ್ತು.

ಪ್ರಭು 'ಟವಲಿ'ನಿಂದ ಮುಖ ಒರಸಿಕೊಳ್ಳುತ್ತಾ ಹಜಾರಕ್ಕೆ ಬಂದ. ಆಗ ತಾನೇ ನೆರೆಮನೆಗೆ ಹೋಗಿದ್ದ ಅವನ ಹೆಂಡತಿ ರೇವತಿಯೂ ಮನೆಯೊಳಕ್ಕೆ ಬಂದಳು. ಇಬ್ಬರಿಗೂ ನಾನು 'ರೂಮಿ'ನಲ್ಲೇ ಇರುವ ವಿಷಯ ತಿಳಿಯದು. ಪಾಪ! ಪ್ರಭು ತನ್ನ "ಜಬರದಸ್ತಿಕೆ"ಯಿಂದ ಮಾತಿಗಾರಂಭಿಸಿದನು.

"ಇವತ್ನನ್ನ ಸ್ನೇಹಿತನ್ನ ಕಾಫಿಗೆ ಕರೆದಿದ್ದೇನೆ. ಬೇಗ ಕಾಫಿ ಮಾಡ್ಬಿಡು.''

"ಇದೇನೊಂದ್ರೆ, ಈಗ್ಹೇಳ್ತಿದ್ದೀರಿ ? ನಿಸೂರಾಯ್ತು........ಮನೇಲೇನ್ಪದಾರ್ಥವಿದೆ. ಇಲ್ಲಾನ್ನೋ ನಿಗಾ ಇಲ್ಲ. ನೀವ್ಕೇಳಿದ Timeಗೆ ಸರಿಯಾಗಿ ಹೇಗ್ಮಾಡ್ಡೋದ್ಕಾಫೀನ ?''

"ನಿನ್ಪುರಾಣ ನಂಗ್ಬೇಡ್ವೇ....ಅದೇನ್ಮನೇಲಿಲ್ವೋ ಬೇಗ ಬೊಗಳ್ಬಿಡು........ ಈ ಕೂಡ್ಲೇ ತಂದ್ಬಿಡ್ತೀನಿ.''

"ಕಾಫೀಗೆ...."

"ಏನೂ ? ಕಾಫೀಗೆ ಕಾಫಿ ಪುಡಿನೇ ? ಸರ್ಹೋಯ್ತು. ಮೊನ್ನೆ ತಾನೆ ಒಂದು ಪೌಂಡ್ಕಾಫಿ ಪುಡಿ ತಂದ್ನಲ್ಲೇ ಆಗ್಩ೇ ಮುಗಿಸ್ಬಿಟ್ಯಾ....ಇರೋದಿಬ್ರು....ಚೆನ್ನಾಗಿಯೇ ಸಂಸಾರ ಮಾಡ್ತೀ ಹಾಗಾದ್ರೆ."

"ಸ್ವಲ್ಪ ಸುಧಾರ್ಸ್ಕೊಳ್ಳೀಂದ್ರೆ. ಹೇಳೋತನಕ....ಆಗ್ಲೇ ಅವಾಂತರ ಮಾಡ್ತೀರಲ್ಲಾ. ಏನಾತುರ ಈಗ್ಬಂದಿರೋದು....ಹು....ಸಕ್ರೆ ಇಲ್ಲ ಮನೇಲಿ, ಅಷ್ಟೆ.''

"ಸಕ್ರೆ ಇಲ್ಲ ? ಅಯ್ಯೋ. ಈಗೇನ್ಮಾಡೋದು ? ಹೋಗ್ಲಿ ಬಿಡು ಬೆಳಗ್ಗೆ ಸಾತೇಕಾಯ್ತಂದಿದ್ನಲಾ. ಇದೆಯಲ್ವೇನೇ ?"

"ಹೂ, ಇದೆ. ಒಂದೇ ಒಂದನ್ನ ಹಾಗೇನೇ ಇಟ್ಟಿದೇನೆ ; ಹೆಚ್ಚಿಲ್ಲ.''

"ಸರಿ ಹಾಗಾದ್ರೆ ! ಚೆನ್ನಾಗಿ ಹೆಚ್ಬಿಟ್ಟು, ಒಗ್ಗರಣೆಗಿಗ್ಗರಣೆ ಅದೇನ್ ಸುಡುಗಾಡೋ ಹಾಕ್ಬಿಟ್ಟು ಕೋಸುಂಬರಿ ಮಾಡ್ಬಿಡು....ಹಾಳ್ಕಾಫೀ ಇಲ್ದಿದ್ರೆ ಹೋಗ್ಲಿ.... ಎರಡ್ಮೂರು ನಿಂಬೆ ಹಣ್ಣೂ ಇದೆ....ಹಾಗೆ ಷರಬತ್ ಮಾಡ್ಬಿಡು....ಕಾಫಿಬೇಡ್ವಾ...."

ಪ್ರಭು ಹೀಗೆ ಹೇಳಿದ ಮೇಲೆ ರೇವತಿ ಬಿದ್ದೂ ಬಿದ್ದೂ ನಕ್ಕಳು. ಯಾರಿಗೆ

ತಾನೇ ನಗೂ ಬರೊಲ್ಲ ಹೇಳಿ ? ನಂಗೂನೂ ನಗು ಉಕ್ಕುಕ್ಕಿ ಬಂದ್ರೂ, ಇನ್ನೂ ಏನೇನಾಗುತ್ತೋ ನೋಡಿಯೇ ಬಿಡಬೇಕೆಂಬ ಕುತೂಹಲ ಹೆಚ್ಚಿ, ನಗುವನ್ನು ತುಟಿ ಕಚ್ಚಿ ತಡೆದೆ. ಪ್ರಭುವಿಗೆ ತಾನಾಡಿದ್ದು ಅರ್ಥವಾಗದೆ ಕೋಪ ಹೆಚ್ಚಿತು...."ಯಾಕ್ಸ್ವೆನ್ನ ನಗ್ತೀಯೇ ? ಇನ್ನಾರಿಸ್ಬಿಡ್ತೇನ್ನೋಡ್ಕೋ....ಹೋಗ್ಲಿ ಅದೇನು ಹೇಳ್ಬಾರ್ದೇ ?" ಇಷ್ಟು ಹೊತ್ತಿಗೆ ರೇವತಿ ನಗುವನ್ನು ಸ್ವಲ್ಪ ಸ್ವಲ್ಪವಾಗಿ ಕಡಮೆ ಮಾಡಿದಳು.... "ಅಯ್ಯೋ ರಾಮ ! ಅದೇನು ಬರ್ತಾಬರ್ತಾ ಬುದ್ಧಿ ಚಿಗುರ್ತಾ ಇದೆ, ಸಕ್ರೆ ಇಲ್ಲಾ ಇಲ್ಲಾಂತ ಬೊಗಳ್ತಿದ್ರೂ ಷರಬತ್ ಮಾಡ್ಕೋಬ್ಹೇಕಂತೆ, ಷರಬತ್ತು....ಬೆಲ್ಲಾ ಹಾಕಿ ಷರಬತ್ ಮಾಡಿದ್ರೆ ನಿಮಗೊಪ್ಪೊಲ್ಲ....ಅದಕ್ಕೇನು ಉಪ್ಪು ಹಾಕ್ಮಾಡ್ಲೇ ಹೇಳಿ ?"

''ಸದ್ಯ, ನಿಲ್ಸೆ ನಿನ್ನಗೂಸ, ಹೋಗ್ಲಿ ಅಕ್ಕಪಕ್ಕದೋರು ಯಾರಾದ್ರೂ ಕೇಳ್ಯಾರು"

"ಕೇಳಿದ್ರೇನಂತೆ, ಇವೆಲ್ಲಾ ಏನ್ಮಹಾ ! ಕೇಳೇನ್ಮಾತ್ನೇ ಮಾಡ್ಯಾರು ನಗ್ತಾರೆ ಅಷ್ಟೇ ತಾನೇ ?"

''ಸಾಕೇ ನಿನ್ನ ಹಾಸ್ಯ. ಹೊತ್ತೋಗದ ನಿನ್ನ ಹಾಸ್ಯ ಸಾಕು....ಸದ್ಯ ಪಕ್ಕದ್ಮನೇಗ್ಹೋಗ್ಬಿಟ್ಟು ಒಂದ್ಬಟಿಕೆ ಸಕ್ರೆ ಸಾಲ ಇಸ್ಕೊಂಡ್ಬಾ, ಹೋಗು."

"ನಿಮಗೆ ಈಗ ಹೊಳೆದ ಬುದ್ಧಿ ನಂಗಾಗ್ಲೇ ಹೊಳೆದು, ಅಲ್ಲಿಂದ್ಲೇ ವಾಪಸ್ ಬರ್ತಿರೋದು—ಇಲ್ಲಾನ್ನಿಸ್ಕೊಂಡು''

"ಈಗೇನ್ಮಾಡೋದು? ಸೊಸೈಟಿ ಇನ್ಸಂಜೇಗೇನೆ ತೆಗೆಯೋದು ? ಹಾಳ್ಸಕ್ರೆ ಇಲ್ಲೆಲ್ಲೂ ಸಿಗೊಲ್ಲ. ಇದೇನ್ಬಂತೋ ಸಕ್ರೇ ಅಭಾವ ಅಂಗ್ಡೀಲಿ....ಈ ಹಾಳು ಯುದ್ಧದಿಂದ, ಎಲ್ಲಾನು, ಥೂ''

' ಎಲ್ಲಿಂದೆಲ್ಲಿಗೆ ಹಾರೋದು ? ಸಕ್ರೆ ಸಮಯಕ್ಕೆ ಸಿಗ್ದಿದೆ ಯುದ್ಧದ್ಮೇಲ್ರೇಗಾಟ್ವೆ ?....ಹೋಗ್ಲಿ. ನಾನ್ನೊಂದುಪಾಯ ಹೇಳ್ತೀನೆ, ಕೇಳ್ತೀರಾ "

''ಏನದು, ಬೇಗ್ಹೇಳು....ಬೇಗ...ಬೇಗ್ಹೇಳೇ....ಅವನೂ ಇನ್ನೇನ್ ಬಂದ್ಬಿಡ್ತಾನೆ....ಅವನ್ಮುಂದೆಲ್ಲಾದ್ರೂ ಮಾನ ತೆಗೆದೀಯೆ....ಇಂಥಾದ್ನಿಕ್ಕೀತೇಂತ್ಕಾದಿರ್ತಾನೆ ಕಥೇ ಬರ್ಯೋಕೆ''

ಏನೂ ಇಲ್ಲಾಂದ್ರೆ. ಒಂದಿಷ್ಟು, ರೋಷ್ಟೇ ರೊಷ್ಟು, ಬೆಲ್ಲಹಾಕಿ ಕಾಫಿ ಮಾಡ್ಕೊಡ್ತೀನೆ, ಸ್ವಲ್ಪವೂ ಗೊತ್ತಾಗ್ದಂಗೆ"

''ಬೇಡ. ಕಣೆ, ಪಾಪ ! ಅವನ್ಗೆಗಾಗೊಲ್ವಂತೆ....ಬೆಲ್ಲಾನೇತಿನ್ನೊಲ್ಲ, ಅವನು....ಇನ್ನು ಬೆಲ್ಲ ಹಾಕಿದ್ಕಾಪಿ....ಕುಡೀ ತಾನ್ಯೇ ? ನೀನೆಷ್ಟು ಯುಕ್ತಿಮಾಡಿದ್ರೂ ತಿಳ್ಕೊಂಡ್ಬಿಡ್ತಾನ್ಯೇ ಅವನು"

''ಇಲ್ಲಾಂದ್ರೆ ಕೊಂಚ ಸುಳಿವ್ ಕೂಡ ಗೊತ್ತಾಗ್ದಂಗೆ ಹಾಗ್ಮಾಡ್ತೀನೆ. ನೋಡೀ ಬೇಕಾದ್ರೆ ಹೇಗಿರ್ಬೇಕು ಕಾಫಿ? ನಿಮ್ಮ ಹೋಟಲ್ ಸ್ಪೆಷಲ್ ಕೂಡ

ಹಾಗಿರೊಲ್ಲ....ಈಗೊಂದುಪಾಯಾಂನ್ರಿ. ಹೋಟಲ್ನಿಂದ್ಲೇ ತರಿಸ್ಕೊಟ್ಬಿಡಿ ಕಾಫೀನ ನಂಗೂ ಒಲೆ ಹಚ್ಕೋಕೆಲ್ಸ ತಪ್ಪುತೆ"

"ಉಹು ಅದೂ ಗೊತಾಗ್ಹೋಗಿಬಿಡುತ್ತೆ ಅವನ್ಗೆ ಇದು ಮನೇ ಕಾಫಿ.... ಇದು ಹೋಟಲ್ ಕಾಫಿಂತ ತಕ್ಷಣವೇ ಕಂಡುಹಿಡಿದ್ಬಿಡ್ತಾನಾ ಘಟಿಂಗ....ಅದೂ ಅಲ್ದೆ ನಾನ: ಜಂಭ ಬೇರೆ ಹೊಡೆದಿದ್ದೀನಿ—ನನ್ನ ಹೆಂಡತಿ ಕಾಫೀ ಮಾಡೊ ಹಾಗೆ ಯಾರೂ ಮಾಡೊಲ್ಲಾಂತ. ಅವನಿಗೆ ನೀನ್ಮಾಡೋ ಕಾಫಿ ರುಚಿ ತೋರಿಸ್ಬೇಕೂಂತ್ಲೇ ಇವತ್ತು ಅವನ್ನ ಕರೆರೋದು."

"ಹಾಗಾದರೆ....ಕಾಫೀ ವಿಚಾರ ನಂಗ್ಬಿಟ್ಬಿಡಿ. ನಾನೇನೋ ಬೆಲ್ಲದ್ಕಾಫೀ ಮಾಡಿಕೊಡ್ತೀನೆ....ನಿಮಗಿನ್ನ್ಯಾವ ಉಪಾಯ ಹೇಳ್ಕೊಡೋಕೂ ಹೊತ್ತಿಲ್ಲ.... ಇಷ್ಟಿವ್ವದ್ರೆ ಅವನಿಗ್ಕೊಡಿ ಇಲ್ದಿದ್ರೆ ನೀವೇ ಸುರ್ಕೊಳ್ಳಿ"

"ಇದೇನೇ ಆಗ್ಲೇ ಇಷ್ಟು ಕೋಪ ?"

"ಕೋಪವಿಲ್ಲಾಂದ್ರೆ....ನಿಮಗೊಂದ್ಗುಟ್ಟೇಳ್ತೀನೆ, ಕೇಳಿ....ಮೊನ್ನೆ ರತ್ನಾನೇ ಹೇಳಿದ್ದು"

"ಏನ್ಗುಟ್ಟದು ? ಯಾರದು ರತ್ನ ?"

"ನಿಮ್ಮ ಸ್ನೇಹಿತನ ಹೆಂಡತಿ ಇನ್ಯಾರು ?....ಈಗ್ನಿಮ್ಮ ಸ್ನೇಹಿತ ಬರ್ಲಿ, ಅವನ್ಮೈಲೇ ಬೇಕಾದ್ರೆ) ಹೇಳಿಸ್ತೀನೆ...ಅವನು ನಿಮ್ಮೆದುರ್ಗೆ ಜೋರ್ಹೊಡೆದ್ರೂ ಮನೇಲಿ ಹೆಂಡತಿ ಮುಂದೆ, ರತ್ನಳ ಮುಂದೆ ಮಂಕು....ಮಂಕೂಂದ್ರೆ ಶುದ್ಧ ಮಂಕು."

"ಏನದು ಗುಟ್ಟು ಹೇಳು"

"ಈಗ್ಮೂರ್ನಾಕ್ದಿನದಿಂದ ಅವರ ಮನೇಲೂ ಬೆಲ್ಲದ್ಕಾಫಿಂತೆ. ಬೆಲ್ಲದ್ಕಾಫಿ ಕುಡಿದ್ರೆ ಮೈಗಾಗೊಲ್ಲಾಂತಂದ್ರಲ್ಲಾ....ಏನೀಗ ಆಗ್ದೇ ಇರೋದು ಅವನ್ಗೆ ?— "ಸಕ್ರೇಂತ ದಬಾಯ್ಸಿ ಸ್ವಲ್ಪ ಬೆಲ್ಲಾಹಾಕಿ ಕಾಫಿ ಮಾಡ್ಕೋಡ್ತೀನೆ, ರೇವತಿ! ಅವ ರಿಗಿನ್ನೂ ನನ್ನ ಯುಕ್ತಿ ತಿಳೀದು—"ಈಗೊಂದ್ತರಹ Taste ಬಂದಿದೆ ಕಾಫೀಗೇಂತ ಕಣ್ಮುಚ್ಕೊಂಡ್ಕುಡೀತಾರೇಂತಂದ್ಳು ರತ್ನ.......ನಿಮಗಿನ್ಯಾಕೆ ಯೋಚ್ನೆ ?ಕಾಫಿ ಮಾಡ್ಕೊಡ್ತೀನೆ ತೊಗೊಂಡ್ಹೋಕ್ಕೊಡಿ ಸದ್ದಿಲ್ದೆ ಕುಡೀತಾನೋ ಇಲ್ವೋನೋಡಿ."

"ಪರ್ವಾಗಿಲ್ಲ ಕಣೆ. ಅಂತೂ ಅವನ್ಮನೇ ಗುಟ್ನೆಲ್ಲಾ Gather ಮಾಡಿದ್ದಿ"

'ರೂಮಿ'ನಿಂದ ನಾನು ಗಟ್ಟಿಯಾಗಿ ಕೆಮ್ಮಿದೆ.

"ಅಯ್ಯೋ, ರೇವತೀ ! ಇದೇನೇ ಇದೂ 'ರೂಮ್ನ'ಲ್ಲೇ ಬೆಕ್ಕಿನ್ಹಾಗೇ ಹಾಗ್ಕೂ ತ್ಕೊಂಡು ನಾವಿಷ್ಟೊತ್ತು ಆಡ್ತಿದ್ದದ್ದೆಲ್ಲಾ ಕೇಳ್ಕೊಂಡಿದಾನೆ....ನಮ್ಗುಟ್ನೂ ರಟ್ನೂ ರಟ್ಮಾಡ್ಬಿಟ್ನಲ್ಲಾ"ಂತ ಪ್ರಭು ಅಂದುಕೊಂಡು 'ರೂಮಿ'ನೊಳಕ್ಕೆ ಬಂದು ಇಬ್ಬರೂ ಹತ್ತು ನಿಮಿಷ ಪುರುಸತ್ತಿಲ್ಲದೆ ನಕ್ಕೆವು.

ಆದರೆ ನಮ್ಮನೇಲೂ ಕಾಫೀಗೆ ಬೆಲ್ಲಾನ್ನೋ ಗುಟ್ಟು ಇದುವರೆಗೂ ನಂಗೆ ತಿಳಿದಿರಲಿಲ್ಲ.

ನಾ. ಪಂ.

ಆದರದ ಆಹ್ವಾನ

ಬಾವನಿಗೆ ಮೂರ್ತಿಯ ಸಪ್ರೇಮ ವಂದನೆಗಳು. ರಾಮು ವಿಷಯವಾಗಿ ನೀವು ಬರೆದ ಎರಡನೆ ಕಾಗದ ಕೈ ಸೇರಿತು.—ಆಗಲಿ ಅದಕ್ಕೇನು....ನನ್ನದೇನು.... ನಿನ್ನದೇನು....? ಇದೂ ನಿನ್ನ ಮನೆಯೆ! ರಾಮುವನ್ನು ಆಗತ್ಯವಾಗಿ ಕಳುಹಿಸು. ಹಿಂದೆ ನಾಪು ನಿಮ್ಮೂರಿಗೆ ಬಂದಾಗಲೆಲ್ಲಾ, ಊರು ಬಿಟ್ಟು ಹೊರಡುವಾಗ ನಾನೂ ಅನೇಕ ಸಲ ಕೇಳಿದೆ. "ನಮ್ಮೂರಿಗೆ ಬರ್ತೀಯೇನೋ?....ಕರೆದುಕೊಂಡು ಹೋಗ್ತೀನಿ" ಅಂತ. ಆದರೆ ನೀನೇ ಮಧ್ಯೆ ಕೊಕ್ಕಿ ಹಾಕಿ...."ಮುಂದಿನ ಸಲ ನಾನೇ ಕಳುಹಿಸುತ್ತೇನೆ" ಅಂತ ಹೇಳುತ್ತಿದ್ದೆ. ಅಂತೂ ಈಗಲಾದರೂ ಕಳುಹಿಸುವಯೋಚನೆ ಮಾಡಿದೆಯಲ್ಲಾ ! ನನ್ನ ಮನೇಗೆ ಬಂದು ಕಾಲೇಜು ಓದ್ತಾನಲ್ಲಾ ಅಂತ ಸಂತೋಷ. ಹೈಸ್ಕೂಲು ಮುಗಿಸಿ, ಈಗಲಾದರೂ ಕಾಲೇಜು ಕಂಡನಲ್ಲಾ........!

ಇಷ್ಟಕ್ಕೂ ಅವನು ಬಂದರೆ ನನಗೆ ಆಗುವ ಭಾರವೇನು?....ಹದಿನೈದು ಜನ ಊಟ ಮಾಡುವ ಕಡೆ ಹದಿನಾರು....ಅಷ್ಟೇ ತಾನೆ. ನೀನು ಅದರ ಯೋಚನೆ ಇಟ್ಕೋಬೇಡ. ರಾಮುವಿಗೂ ಏನು—ಅವನ ವಯಸ್ಸಿನ ಐದಾರು ಜನ ಧಾಂಡಿಗರು ನನ್ನ ಮನೆಯಲ್ಲಿದ್ದಾರೆ. ಅವಳ-ತಮ್ಮಂದಿರು. ಅವರ ಜೊತೆಗೆ ಇವನೂ ಒಬ್ಬ.....ಸಣ್ಣ ಮಕ್ಕಳು ಬೇರೆ ಮನೆಯಲ್ಲಿ. ರಾಮೂಗೂ ಮಕ್ಕಳನ್ನಾಡಿಸುವುದೆಂದರೆ ತುಂಬಾ ಪ್ರೀತಿ.

ನಿನ್ನ ತಾಯಿಯವರಿಗೆ ಈಗ ಉಬ್ಬಸ ಹೇಗಿದೆ? ನನ್ನ ಅಕ್ಕನಿಗಂತೂ ಈಚೆಗೆ ವಿಪರೀತವಾಗಿದೆ. ಸದಾ ಕೆಮ್ಮುತ್ತಿರುತ್ತಾಳೆ....ರಾತ್ರಿ ಹಗಲೂ ಅದೇ ಶಬ್ದ ಮನೆಯಲ್ಲಿ. ಪಕ್ಕದ ಮನೆಯವರು ಗಲಾಟೆ ಮಾಡುತ್ತಿದ್ದಾರೆ, ನನ್ನ ನಾಲ್ಕನೆಯ ಮಗ ಶೀನುವಿಗೆ ಹತ್ತು ಹದಿನೈನು ದಿನದಿಂದ ಜ್ವರ....ದಿನ ಬಿಟ್ಟು ದಿನ ವಕ್ಕರಿಸುತ್ತಿದೆ. ಡಾಕ್ಟರು ಏನೋ ಔಷಧಿ ಕೊಡುತ್ತಿದ್ದಾರೆ. ದಿನದಿನಕ್ಕೂ ಬಣ್ಣ ಬದಲಾಯಿಸುತ್ತಿದ್ದಾರೆ.—ಆದರೂ ಯಾಕೋ ಗುಣಮುಖವೇ ಇಲ್ಲ.

ಲೀಲು ಹಡೆದು ಗಂಡುಮಗು—ಮನೆಯಲ್ಲೇ ಸುಖಪ್ರಸವವಾಯಿತು. ಮಗು ಅದರ ಅಪ್ಪನ ಹಾಗೆ....ಕಣ್ಣು ಮೂಗು ಎಲ್ಲಾ....ಅವಳಿಗೆ ಮಾತ್ರ ಜ್ವರ ಇನ್ನೂ ಬಿಟ್ಟಿಲ್ಲ. ಸಧ್ಯದಲ್ಲೇ ವಾಸಿಯಾಗುವ ಸಂಭವವಿದೆಯಂತೆ.

ನಿನಗೆ ಇನ್ನೊಂದು ವಿಷಯ ಹೇಳಲೇ ಇಲ್ಲ. ನಾನಿದ್ದ ಮನೆ ಭೋಗ್ಯಕ್ಕೆ ಕೊಟ್ಟು ಈಗ ಮಲ್ಲೇಶ್ವರದಲ್ಲಿ ಹದೆನೆಂಟನೆಯ ಕ್ರಾಸಿನಲ್ಲಿ ಮನೆ ಮಾಡಿದ್ದೇನೆ. ಎತ್ತರವಾದ ಪ್ರದೇಶ....ಗಾಳಿ ಚೆನ್ನಾಗಿ ಬೀಸುತ್ತದೆ. ನೀರು ಹತ್ತುವುದೇ ಇಲ್ಲ. ರಾಮು ಬಂದರೆ ಭಾವಿಯಿಂದ ಸೇದಿ ತುಂಬಿಸಬಹುದು. ರಾಮುವಿಗೆ ಕಾಲೇಜು ತುಂಬಾ ದೂರವಾಯಿತು. ಪಾಪ! ಮನೆ ಹತ್ತಿರ ಮಾಡಬಹುದಾಗಿತ್ತು. ಆದರೂ ಪರವಾಗಿಲ್ಲ. ಒಂದು ಹಳೇ ಬೈಸಿಕಲ್ಲು ಸಿಕ್ಕರೆ ಅವನೇ ರಿಪೇರಿ ಮಾಡಿ ಉಪಯೋಗಿಸಬಹುದು. ಆದರೆ, ಒಂದು ಮಾತು. ಇಲ್ಲಿಂದ ಕಾಲೇಜುತನಕ ರಸ್ತೆಯಲ್ಲಿ ಲಾರಿಗಳ ಓಡಾಟ ವಿಪರೀತ. ನಡೆದರೂ ಕಷ್ಟ. ಸೈಕಲ್ ತುಳಿದರೂ ಕಷ್ಟ. ರಾಮು ಬಂದ ಮೇಲೆ ತಿಂಗಳು ತಿಂಗಳಿಗೂ ಒಂದೆರಡು ಗೊನೆ ನಂಜನಗೂಡು ರಸಬಾಳೆ ಹಣ್ಣು ತಪ್ಪದೆ ಕಳುಹಿಸು.

ರಾಮು ಯಾವಾಗ ಬರುತ್ತಾನೆಂದು ಬರೆ.

ನಿನ್ನ

ಮೂರ್ತಿ

ರಸಬಿಂದು

ನಾರಾಯಣಶೆಟ್ಟರು ಬೆಂಗಳೂರು ತಲುಪಿದಾಗ ರಾತ್ರಿ ಹತ್ತು ಗಂಟೆ ಆಗಿತ್ತು. ಇಳಿದುಕೊಳ್ಳಲು ಕೆಂಪೇಗೌಡ ರಸ್ತೆಯಲ್ಲಿರುವ "ಮೈಸೂರು ಕಫೆ''ಗೆ ಹೋದರು ಪಾಪ! ಅವರ ಗ್ರಹಚಾರಕ್ಕೆ ಅಲ್ಲಿ ಒಂದು ಕೊಠಡಿಯು ಖಾಲಿ ಇರಲಿಲ್ಲ. ''ರಾತ್ರಿ ಪೂರ್ತಾ ಮಲಗುವುಕ್ಕೆ ಜಾಗ ಕೊಡಿ, ಹೇಗಾದ್ರೂ ಮಾಡಿ ಬೆಳಗ್ಗೆಯೇ ಹೊರಟುಹೋಗುತ್ತೇನೆ, ಮೈಸೂರು ರೈಲಿಗೆ" ಎಂದು ಹೇಳಿದ್ದರ ಮೇಲೆ ಆ ಹೋಟಲ ಮಾಲೀಕರು "ಹುಬ್ಬಳ್ಳಿ ಶೇಠ್ ಇರುವ ಕೊಠಡಿಯಲ್ಲಿ ಒಂದು ಮಂಚ ಕಾಲಿಯಿದೆ. ಅವರಾಗಲೇ ನಿದ್ರೆ ಮಾಡುತ್ತಾ ಇದ್ದಾರೆ. ಇನ್ನೊಂದು ಬಾಗಲಿಂದ ಒಳಗೆ ಹೋಗಬಹುದು ನೀವು ಅಲ್ಲಿ ಮಲಕ್ಕೊಳ್ಳಿ, ಪರವಾ ಇಲ್ಲ" ಎಂದರು.

ಶೆಟ್ಟರು ಮಲಗುವುದಕ್ಕೆ ಮುಂಚೆ, ಆ ಹೋಟಲ ಆಳಿಗೆ ಬೆಳಗ್ಗೆ ಐದುವರೆಗೆ ಸರಿಯಾಗಿ ತಮ್ಮನ್ನು ಎಬ್ಬಿಸಬೇಕೆಂದು ಹೇಳಿದರು.

ಆ ಆಳು ಕರಾರುವಾಕಾಗಿ, ಅಲಾರಂ ಗಡಿಯಾರದಂತೆ, ಬಂದು ಶೆಟ್ಟರನ್ನು ಎಬ್ಬಿಸಿದನು.

ಶೆಟ್ಟರು ಟಾವಲುಗಳನ್ನು ತೆಗೆದು ಬಚ್ಚಲುಮನೆಗೆ ಸ್ನಾನಕ್ಕೆ ಹೋದರೆ ಅಲ್ಲಿದ್ದ ಮಾಣಿ, "ನಮಸ್ಕಾರ್ ಶೇಠ್‌ಜಿ ನೀರು ದೋಚಲೇ'' ಎಂದು ಕೇಳಿದನು. ಶೆಟ್ಟರು ಸ್ವಲ್ಪ ಬೆಪ್ಪಾದರು.

ಸ್ನಾನ ಮುಗಿಸಿಕೊಂಡು ಫಲಹಾರಕ್ಕೆಂದು ಕೂತಾಗ ತಿಂಡಿ ಕೊಡುವ ಮಾಣಿ ''ಏನು ಶೇಠ್‌ಜಿ, ದೋಸೆ ಪಲ್ಯಾನೋ, ಇಡ್ಲಿ ಸಾಂಬಾರ್‌ರೋ" ಎಂದುದಕ್ಕೆ ಶೆಟ್ಟರು ಬೆಚ್ಚಿಬಿದ್ದರು.

ಸಾಮಾನುಗಳನ್ನು ತೆಗೆದುಕೊಂಡು ಹೋಟಲು ಖರ್ಚನ್ನು ಕೊಡಲು ಗುಮಾಸ್ತನ ಬಳಿಗೆ ಹೋದಾಗ, ಆತ, ''ಶೇಠಜೀಯವರದು ಒಟ್ಟು ಎಷ್ಟೋ" ಎಂದು ಅರಚಿಕೊಂಡ. ಶೆಟ್ಟರು ಮಂಕಾದರು.

ಗಾಡಿಗೆ ಸಾಮಾನುಗಳನ್ನು ಹಾಕಿ ಆಯ್ತು. ಗಾಡಿ ಹೊಡೆಯುವುದಕ್ಕೆ ಮುಂಚೆ ಗಾಡಿಯವನು ''ಎಲ್ಲಿಗೆ ಹೊಡೀಲಿ, ಶೇಠ್" ಎಂದು ಕೇಳಿದಾಗ ಶೆಟ್ಟರ ಬಾಯಿ ಒಣಗಿಕೊಂಡೇ ಬಂಯಿತು.

ಟಿಕೀಟು ತೆಗೆದುಕೊಳ್ಳುವುದಕ್ಕೆ ಹೋದರೆ ಟಿಕೀಟು ಕೊಡುವಾತ ''ಏನು ಶೇಠ್‌ಜೀ, ಎಲ್ಲಿಗೆ ಕೊಡಲಿ ಟಿಕೀಟು.... ತಗೊಳ್ಳಿ....ಚಿಲ್ಲರೆ ಸರಿಯಾಗಿದೆಯೇ, ಶೇಠ್‌ಜಿ'' ಎನ್ನಬೇಕೆ? ಶೆಟ್ಟರ ಉಸಿರೇ ಅಡಗಿ ಹೋಯ್ತು. ಹಾಗೆ ಎದುರಿಗಿದ್ದ ಪ್ಲಾಟ್‌ಫಾರಂ ಟಿಕೇಟನ್ನು ಕೊಡುವ ಯಂತ್ರದ ಮೇಲಿನ ಅರ್ಧ ಉದ್ದಕ್ಕೂ ಕೆಳಗಿನ ಅರ್ಧ ಅಡ್ಡಕ್ಕೂ ಪ್ರತಿಬಿಂಬಿಸುವ ವಿಚಿತ್ರ ಕನ್ನಡಿಯಲ್ಲಿ ತಮ್ಮ ಮತ್ತೂ ವಿಚಿತ್ರ ಸ್ವರೂಪ ಬಿಂಬವನ್ನು ನೋಡಿಕೊಂಡು, ಗುರುತಿಸಲಾರದೆ ಬೆಚ್ಚುಬಿದ್ದು, ಹಣೆ ಹಣೆ ಚಚ್ಚಿಕೊಂಡು "ಅಯ್ಯೋ ದೇವ್ರೇ. ಆ ಹೋಟಲ ಆಳು, ಶೆಟ್ಟರನ್ನು ಬದಲು ಶೇಠ್‌ಜಿಯನ್ನು ಎಬ್ಬಿಸಿಬಿಟ್ಟಿದ್ದಾನೆ" ಎಂದು ಉದ್ಗಾರ ತೆಗೆದರಂತೆ.

....ಬಂದೇ

ಮನೆಯಲ್ಲಿ ಯಾರೂ ಇರಲಿಲ್ಲ. ಅಜ್ಜಿ ಪುಳ್ಳಂಗಾಯುಂಡೆ ಡಬ್ಬ ಎಲ್ಲಿ ಇಡು ತ್ತಾಳೆ ಅನ್ನುವುದನ್ನು ಬೆಳಿಗ್ಗೇನೆ ನೋಡಿ ಕೊಂಡಿದ್ದೆ. ಅಜ್ಜಿ ಪುರಾಣಕ್ಕೆ ಹೋಗಿ ದ್ದಳು. ನಾನು ಮೆಲ್ಲಗೆ ಬೀದಿ ಬಾಗಿ ಲಿನ ಚಿಲಕ ಹಾಕಿ, ಉಗ್ರಾಣದ ಒಳ ಹೊಕ್ಕು, ಬೀದಿ ಬಾಗಿಲು ಹಾಕಿರುವು ದನ್ನು ಮರೆತು, ಉಗ್ರಾಣದ ಬಾಗಿಲ ನ್ನೂ ಹಾಕಿ ಅಮುಕಿ ಬಿಟ್ಟೆ. ಅಮುಕಿದ ಬಾಗಿಲನ್ನು ಹೊರಗಡೆಯಿಂದ ಒದ್ದರೇ ನೇ ಇನ್ನು ತೆಗೆಯಬೇಕಾದರೆ, ಅನ್ನು ವುದು. ಆಗ ಪುಳ್ಳಂಗಾಯುಂಡೆ ಚಪಲ ಚಿಂದಿ ಎದ್ದುಹೋಯಿತು. ಒಳಗಡೆ ಸಿಕ್ಕಿ ಬಿದ್ದೆ. ತಪ್ಪಿಸಿ ಕೊಳ್ಳುವ ಬಗೆ ಹೇಗೆ? ಮನೆಗೆ ಬಂದವರಿಗೆ ಬೀದಿ ಬಾಗಿ ಲು ಬೇರೆ ತೆಗೆಯಬೇಕು. ಆ ಹಾಳು ಉಗ್ರಾಣದ ಬಾಗಿಲು ಆದರೆ ಹೊಸಲಿನ ಪಟ್ಟಿಗೆ ಸರಿಯಾಗಿ ಸೇರಿಕೊಂಡು ಬಾಗಿ ಲ ಮೇಲೆ ಕುಳಿತು ಬಿಡುತ್ತದೆ. ಸ್ವಲ್ಪ ಉಬ್ಬಿಕೊಳ್ಳುವುದೂ ಇಲ್ಲ. ಎಳೆಯೋಣ ಅಂದರೆ ಅಲ್ಲೂ ಬಿರುಕು ಜಾಗವೂ ಕೂಡ ಬಿಟ್ಟುಕೊಳ್ಳುವುದಿಲ್ಲ. ಮಗು ಚಿಕ್ಕೆಯೋ ಸೌಟಿನ ಬಾಲವನ್ನೋ ಉಪಯೋಗಿಸಿ ಶ್ರಮವಹಿಸಿ ತೆರೆಯೋಣ ಅಂದರೆ ನಮ್ಮ ಮನೇಲಿ ತಿಂಡಿ ಪೋತ್ತರನ್ನ ಹಿಡಿಯು ವುದಕ್ಕೆ ಮಾಡಿರುವ ಬೋನೇ ನಮ್ಮ ಉಗ್ರಾಣ ಅಂತ ಈಗ ನನಗೆ ಅನ್ನಿಸು ವುದು.---ಸರಿ, ಅಮ್ಮ ಕೋಸಂಬರಿ ಸಮೇತ ಬಾಗಿಲಿಗೆ ಬಂದು ಕೂಗಿಕೊ ಳ್ಳುತ್ತಾ ಇದ್ದಾಳೆ. ಅಜ್ಜಿ ಪುರಾಣ ಮುಗಿಸಿಕೊಂಡು ಬಂದಳು. ಆ ವೇಳೆ ಗೆ ಅಣ್ಣನೂ ಬರುವ ಹೊತ್ತಾಯಿತು. "ಬಂದೇ....' ಅಂತ ನಾನು ಒಳಗಡೆ ಯಿಂದ ಕೂಗಿಕೊಳ್ಳುತ್ತಾ ಇದ್ದೇನೆ, ಬರುವುದಕ್ಕೆ ಅವಕಾಶವಿರಲಿಲ್ಲ. ಈ ಕ ಡೆ ಕೋಸುಂಬರಿಯೂ ಸಿಕ್ಕುವ ಹಾಗಿಲ್ಲ ಆ ಕಡೆ ಸಿಕ್ಕುವ ಪುಳ್ಳಂಗಾಯುಂಡೆಯ ನ್ನ ತಿನ್ನುವುದಕ್ಕೆ ಮನಸ್ಸಿಲ್ಲ. ಈ ಅವ ಸ್ಥೆಯಲ್ಲಿ ಒಂದು ನರಳಿದೆ ನೋಡಿ, ನಾನು ಹೇಳಿಕೊಂಡರೆ ನಿಮಗೆ ಗೊತ್ತಾ ಗುವುದಿಲ್ಲ. ಪುನಃ ಬಾಗಿಲು ತೆಗೆಯು ವುದಕ್ಕೆ ಆಗದಂತಹ ಬೋನೊಂದರಲ್ಲಿ ಕೂತರೆ ಆ ಕಷ್ಟ ಗೊತ್ತಾದೀತು ಅಲ್ಲ, ಸುಮ್ಮನೆ ಅಜ್ಜಿಯನ್ನು ಇನ್ನು ಎರಡು ಉಂಡೆ ಕೇಳಿ ತಿಂದಿದ್ದರೆ ಆಗುತ್ತಿರಲಿ ಲ್ಲವೆ? ನಮ್ಮಜ್ಜಿ ಒಳ್ಳೆಯವರು; ಬೈದು ಕೊಂಡಾದರೂ ಆ ಕಡೆ ಎರಡು ಕೊಡು ತ್ತಿದ್ದರು. ಅಂತೂ ಇಷ್ಟು ಹೊತ್ತಿಗೆ ನಾನು ಆ ದಿನ 'ಬಂದೇ' ಅಂತ ಎಂ ತಹ ಕಷ್ಟದಲ್ಲಿ ಕೂಗಿರಬೇಕು ಅನು ವುದು ನಿಮ್ಮ ಅರಿವಿಗೆ ಬಂದಿದೆ ಅಂತ ನಂಬಿದ್ದೇನೆ.

ಎಸ್. ಎಸ್.



ಕಾಲ ಬಳಿಯಲ್ಲಿರುವ ಬಾಳೇ ಹಣ್ಣಿನ ಸಿಪ್ಪೆಯನ್ನು ಕಾಣದೆ: ''ಮುಂದೇನು ಬರುವುದೆಂದು ಯಾರಿಗೆ ಈ ಕಾಲದಲ್ಲಿ ಹೇಳುವುದಕ್ಕೆ ಸಾಧ್ಯ ಸ್ವಾಮೀ''

ಸರ್ವಾಂಗ ಸುಂದರವಾದ

ಸರ್ವ ಜನಾದರಣೀಯವಾದ ಸಾಮಾಜಿಕ ಚಿತ್ರ

★ "ಜೀವನ ನಾಟಕ" ★

ಮುಖ್ಯ ಪಾತ್ರಗಳಲ್ಲಿ :

★ ನಕ್ಕು ನಗಿಸುವ ವಿನೋದ ರತ್ನಾಕರ

ನಾಟಕ ರತ್ನ ಜಿ. ಹೆಚ್. ವೀರಣ್ಣ,

★ "ಆದ್ಮಿ" ಚಿತ್ರದಲ್ಲಿ ಖ್ಯಾತಿಯನ್ನು ಪಡೆದ

ಕನ್ನಡ ನಟಿ ಶಾಂತಾ ಹುಬ್ಳೀಕರ್

★ ಕನ್ನಡ ರಂಗಭೂಮಿಯ ರಾಣಿ

ಸಂಗೀತ ವಸಂತ ಕೋಕಿಲ ಬಿ. ಜಯಮ್ಮ



ಮೈಸೂರು ರಣಜಿತ್ ಟಾಕೀಸಿನಲ್ಲಿ

ಪ್ರದರ್ಶಿಸಲ್ಪಡುತ್ತಿದೆ

ಸಾಗರ್‌ದಲ್ಲಿ ಮುಂದಿನ ಬದಲಾವಣೆ

Sole Distributors:–

SELECT PICTURES CURCIUT

Bangalore City.

Printed & Published by K. Jeevanna Rao : Prajamata Power Press, Bangalore City Editor: Dr. R SHIVARAM.